International Journal of Kannada Research 2019; 5(1): 77-86




International Journal of Kannada Research
www.kannadajournal.com

**ISSN: 2454–5813**
IJKR 2019; 5(1): 77-86
© 2019 IJKR
www.kannadajournal.com
Received: 26-12-2018
Accepted: 28-01-2018

**ಡಾ. ಯರ್ರಿಸ್ವಾಮಿ ಈ.**
*ಸಹಾಯಕ ಪ್ರಾಧ್ಯಾಪಕ, ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ –೫೮೩೨೭೬, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ, ಕರ್ನಾಟಕ ರಾಜ್ಯ*

**Correspondence**
**ಡಾ. ಯರ್ರಿಸ್ವಾಮಿ ಈ.**
*ಸಹಾಯಕ ಪ್ರಾಧ್ಯಾಪಕ, ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ –೫೮೩೨೭೬, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ, ಕರ್ನಾಟಕ ರಾಜ್ಯ*

# ಅಕಾಡೆಮಿಕ್ ಮತ್ತು ಹೋರಾಟಗಳೆರಡರ ಸಂಕೇತ ಶರ್ಮಿಳಾ ರೇಗೆ

**ಡಾ. ಯರ್ರಿಸ್ವಾಮಿ ಈ.**

ದಲಿತ ಸ್ತ್ರೀವಾದವನ್ನು ಚಾಲನೆಗೆ ತಂದ ಶರ್ಮಿಳಾ ರೇಗೆ ಜಂಡರ್ ಅಧ್ಯಯನ, ದಲಿತ ಅಧ್ಯಯನ ಮತ್ತು ಸಮಾಜಶಾಸ್ತ್ರ ಅಧ್ಯಯನಗಳಲ್ಲಿ ಚಿರಪರಿಚಿತರಾಗಿದ್ದಾರೆ. ಅವರು ತಮ್ಮನ್ನು ಅಕಾಡೆಮಿಕ್ ವಲಯದಲ್ಲಿ ಮಾತ್ರವಲ್ಲದೆ ಮಹಿಳಾ ಚಳವಳಿ ಮತ್ತು ದಲಿತ ಚಳವಳಿಗಳಲ್ಲಿಯೂ ನಿರಂತರವಾಗಿ ತೊಡಗಿಸಿಕೊಂಡಿದ್ದರು. ಅಕಾಡೆಮಿಕ್ ಮತ್ತು ಹೋರಾಟಗಳೆರಡೂ ಪ್ರತ್ಯೇಕವೆಂದು ಸಾಧಿಸುವ ಪ್ರವೃತ್ತಿ ಪ್ರಸ್ತುತ ವಿಶ್ವವಿದ್ಯಾಲಯಗಳಲ್ಲಿ ಅಪಾಯಕಾರಿಯಾಗಿ ಬೆಳೆದಿದೆ.

ಶರ್ಮಿಳಾ ರೇಗೆ ಅಧ್ಯಯನ ಮತ್ತು ಚಳವಳಿಗಳೆರಡರ ನಡುವೆ ಕೊಂಡಿಯಾಗಿ ಕಾರ್ಯ ನಿರ್ವಹಿಸಿದರು. ಅವರು ಜಾತಿ ಮತ್ತು ಲಿಂಗಾಧಾರಿತ ದೌರ್ಜನ್ಯ ವಿರುದ್ಧ ಸಾಮಾಜಿಕ ಪ್ರತಿಭಟನೆಗೆ ಮುಂದಾಗಿದ್ದ ಹೋರಾಟಗಾರರಾಗಿದ್ದರು. ಅವರ ತರಗತಿಗಳು ನಿಜ ಜೀವನದಲ್ಲೆದುರಿಸಿದ ಸವಾಲುಗಳು ಮತ್ತು ಸಮುದಾಯದೊಂದಿಗಿನ ಸಾಮಾಜಿಕ ತಿಳುವಳಿಕೆಯ ಸಮ್ಮಿಲನದಲ್ಲಿ ಹುಟ್ಟಿದ ವಿವೇಚನಾಪೂರ್ಣ ಲಹರಿಯಾಗಿರುತ್ತಿದ್ದವು. ಅವರು ಸಿದ್ಧಾಂತ, ವಿಚಾರಧಾರೆ ಹಾಗೂ ರೂಢಿಗತ ಪದ್ಧತಿಗಳ ನಡುವಿನ ಪರಸ್ಪರ ಸಂಬಂಧಗಳ ಮೇಲೆ ಚರ್ಚೆ ಕೇಂದ್ರೀಕರಿಸುತ್ತಿದ್ದರು. ಲಿಂಗ ಸಂಬಂಧಿ ಅಧ್ಯಯನ ಹಾಗೂ ದಲಿತ ಅಧ್ಯಯನ ಇವೆರಡೂ ಒಂದರೊಳಗೊಂದು ಬೆರೆತ ಸಂಘಟಿತ ಕ್ಷೇತ್ರವೆಂದು ರೇಗೆ ನಂಬಿದ್ದರು. ಅದರ ಪ್ರಾತಿನಿಧಿಕ ಮಾದರಿಯಾಗಿ ಅವರ ಬದುಕು ಮತ್ತು ಬರಹ ನಡುವಿನ ಸಂಬಂಧ ಹುಡುಕುವ ಆಶಯ ಇಲ್ಲಿದೆ.

## ಬಾಲ್ಯ ಶಿಕ್ಷಣ

ಮಹಾರಾಷ್ಟ್ರದ ಪುಣೆ ಜಿಲ್ಲೆಯಲ್ಲಿ ೧೯೬೪ ಅಕ್ಟೋಬರ್ ೭ ರಂದು ಜನಿಸಿದ ಶರ್ಮಿಳಾ ರೇಗೆ ಪುಣೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವಲ್ಲದೆ ಫರ್ಗ್ಯುಸನ್ ಕಾಲೇಜಿನಲ್ಲಿ ಪದವಿಪೂರ್ವ ಮತ್ತು ಪದವಿ ಶಿಕ್ಷಣ ಮುಗಿಸಿ, ಪುಣೆ ವಿಶ್ವವಿದ್ಯಾಲಯದಲ್ಲಿ ಸಮಾಜಶಾಸ್ತ್ರ ವಿಷಯದಲ್ಲಿ ಎಂ.ಎ. ಹಾಗೂ ಎಂ.ಫಿಲ್ ಪದವಿ ಗಳಿಸಿದರು. ಪುಣೆಯ ಶ್ರೀಮತಿ ಮೀರಾ ಕಾಲೇಜಿನಲ್ಲಿ ಉಪನ್ಯಾಸಕ ವೃತ್ತಿ ಆರಂಭಿಸಿದರು. ಈ ಮಧ್ಯೆ ಪುಣೆ ವಿಶ್ವವಿದ್ಯಾಲಯ ತನ್ನ ಸಮಾಜಶಾಸ್ತ್ರದ ಸ್ನಾತಕೋತ್ತರ ಪದವಿ ಪಠ್ಯಕ್ರಮದ ಭಾಗವಾಗಿ 'ಮಹಿಳೆಯರ ಸಮಾಜಶಾಸ್ತ್ರ' ಎಂಬ ಪತ್ರಿಕೆಯನ್ನು ಐಚ್ಛಿಕ ವಿಷಯವಾಗಿ ಕಲಿಸಲಾರಂಭಿಸಿತ್ತು. ಆ ಪತ್ರಿಕೆಯ ಪಠ್ಯಕ್ರಮ ಶಿಷ್ಟ ಮತ್ತು ಸರಳ ಸಮಾಜಶಾಸ್ತ್ರದ ಚೌಕಟ್ಟಿನೊಳಗಡೆ ಮೈದಳೆದಿತ್ತು. ಅದರಿಂದ ಪ್ರೇರಿತವಾದ ವಿಶ್ವವಿದ್ಯಾಲಯ ತನ್ನ ಕ್ಯಾಂಪಸ್‌ನಲ್ಲಿ ಮಹಿಳಾ ಅಧ್ಯಯನ ಕೇಂದ್ರ ಆರಂಭಿಸುವ ಪ್ರಸ್ತಾವನೆಯನ್ನು ಯುಜಿಸಿಗೆ ಕಳಿಸಿತ್ತು. ಅದಕ್ಕೆ ಯುಜಿಸಿ ೧೯೮೭ರಲ್ಲಿ ಒಪ್ಪಿಗೆಯೂ ನೀಡಿತು.

ಆ ಪ್ರದೇಶದಲ್ಲಿ ಮಹಿಳಾ ಚಳವಳಿಯಲ್ಲಿ ಚಿರಪರಿಚಿತ ಕಾರ್ಯಕರ್ತೆಯಾಗಿದ್ದ ವಿದ್ಯುತ್ ಭಾಗವತ್‌ರನ್ನು ತನ್ನ ಮಹಿಳಾ ಅಧ್ಯಯನ ಕೇಂದ್ರದ ಅಧ್ಯಾಪಕಿಯಾಗಿ ಪುಣೆ ವಿಶ್ವವಿದ್ಯಾಲಯ ನೇಮಕ ಮಾಡಿತು. ಮಹಿಳಾ ಅಧ್ಯಯನ ಕೋರ್ಸ್ ಪಠ್ಯ ಕಲಿಸುವಿಕೆಗಾಗಿ ಅವರು ಪ್ರಮುಖ ಸ್ತ್ರೀವಾದಿ ಚಿಂತಕರನ್ನು ಕರೆಸಿದರು. ಅದನ್ನು ಪುಣೆ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ಕೇಂದ್ರದಲ್ಲಾದ ಮೊದಲ 'ಮಾದರಿ ಬದಲಾವಣೆ' ಎಂದು ಗುರುತಿಸಲಾಗಿದೆ. ಅನಂತರ ೧೯೯೧ರಲ್ಲಿ ಯುಜಿಸಿ ಮಹಿಳಾ ಅಧ್ಯಯನ ಕೇಂದ್ರದಲ್ಲಿ ಬೋಧನಾ ಹುದ್ದೆ ಸೃಜನೆಯಾಯಿತು. ಅದಕ್ಕೂ ಮೊದಲು ಶರ್ಮಿಳಾ ರೇಗೆ ಮಹಿಳಾ ಅಧ್ಯಯನ ಕೇಂದ್ರದಲ್ಲಿ ಬೋಧನೆ ಮಾಡಲು ಬರತೊಡಗಿದ್ದರು. ಆಗ ಶರ್ಮಿಳಾ ತುಂಬ ವಿಭಿನ್ನವಾಗಿದ್ದು ಅಧ್ಯಯನವೆಂಬುದು ಅವರ ದೃಷ್ಟಿಯಲ್ಲಿ ಸಾಮಾಜಿಕ ವ್ಯವಹಾರ ನಿರ್ವಹಣೆಗೆ ಉಪಯೋಗವಾಗುವ ಜ್ಞಾನದ ಹುಡುಕಾಟವಾಗಿತ್ತು.

ನಂತರ ಶರ್ಮಿಳಾ ತಮ್ಮ ಪರಿವರ್ತನೆಯ ಕಲ್ಪನೆಯನ್ನು ಮರುವ್ಯಾಖ್ಯಾನಗೊಳಿಸಿದರಲ್ಲದೆ 'ಕೇವಲ ವರ್ಗ ಸಂಘರ್ಷದ ಮುಖಾಂತರ ಕ್ರಾಂತಿ'ಯ ಕಲ್ಪನೆಯನ್ನು ಶಿಸ್ತುಬದ್ಧ ಮಾರ್ಕ್ಸ್‌ವಾದಿ ಸೀಮಿತ ಚೌಕಟ್ಟಿನಲ್ಲಿ ಅರ್ಥೈಸದೆ ಅದನ್ನು ಲಿಂಗ ಮತ್ತು ಜಾತಿ ವಿಷಯಗಳ ಜೊತೆ ಮುಖಾಮುಖಿ ಮಾಡುತ್ತಿದ್ದರು. ಭಾರತೀಯ ಸಮಾಜದ ಜಾತಿ ಮತ್ತು ಲಿಂಗ ಸಮಸ್ಯೆಗಳ ವಿಶ್ಲೇಷಣೆಯಲ್ಲಿ ಮಾರ್ಕ್ಸ್‌ವಾದಿ ತಾತ್ವಿಕತೆ ಹೊಂದಾಣಿಕೆಯಾಗುವುದಿಲ್ಲವೆಂದು ಕಂಡುಕೊಂಡರು. ಪುಣೆ ವಿಶ್ವವಿದ್ಯಾಲಯದಲ್ಲಿ ಮಹಿಳಾ ಅಧ್ಯಯನ ಕೇಂದ್ರದ ಶೈಕ್ಷಣಿಕ ಚಟುವಟಿಕೆಗಳ ಮುಖಾಂತರ ತಮ್ಮ ಸಾಮಾಜಿಕ ಪ್ರಯೋಗಗಳನ್ನು ಅತ್ಯಂತ ಉತ್ಕಟತೆಯಿಂದ ಮುಂದುವರೆಸಿದ ರೇಗೆ ತಮ್ಮ ಲೇಖನಗಳಲ್ಲಿ ಸ್ತ್ರೀವಾದಿ ಹಾಗೂ ದಲಿತ ಸತ್ಯಶೋಧಕ ಚಳವಳಿಗಳಿಗೆ ಹೊಸ ಸೈದ್ಧಾಂತಿಕ ಅಡಿಪಾಯ ಹಾಕಿದರು. ಮಹಿಳಾ ಅಧ್ಯಯನ ಕೇಂದ್ರದ ಬೋಧನೆ ಹಾಗೂ ಸಂಶೋಧನಾ ಚಟುವಟಿಕೆಗಳೆರಡರಲ್ಲೂ ಶರ್ಮಿಳಾ ಆಮೂಲಾಗ್ರ ಬದಲಾವಣೆ ತಂದರು.

**ಹೊಸ ಸ್ಥಾನದ ನಿರ್ಮಾಣ**

ಶರ್ಮಿಳಾ ರೇಗೆ ಶ್ರೀಮತಿ ಮೀರಾ ಕಾಲೇಜು ಮತ್ತು ಪುಣೆ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ಕೇಂದ್ರದಲ್ಲಿ ಬೋಧಕರಾಗಿ ಕಾರ್ಯನಿರ್ವಹಿದರು. ಮುಂಬಯಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಕೆಲಕಾಲವಿದ್ದು ನಂತರ ಪುಣೆ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ಕೇಂದ್ರಕ್ಕೆ ಮರಳಿದರು. ಅವು ಅವರ ವೃತ್ತಿಜೀವನದಲ್ಲಿ ಯಾವುದೇ ಅಲ್ಲೋಲಕಲ್ಲೋಲವನ್ನುಂಟುಮಾಡಲಿಲ್ಲ. ನಿಗದಿತ ಉದ್ದೇಶ ಹೊಂದಿದ್ದ ಅವರ ಅಪಾರ ಜ್ಞಾನದ ಹುಡುಕಾಟವನ್ನೂ ದಲಿತ ಹಾಗೂ ಲಿಂಗ ಅಧ್ಯಯನದಲ್ಲಿ ತಮ್ಮನ್ನು ತೊಡಗಿಸಿಕೊಂಡವರು ಭಾರತೀಯ ಸಂದರ್ಭದಲ್ಲಿ ಇಟ್ಟುಕೊಳ್ಳಬೇಕಾದ ಬದ್ಧತೆಯನ್ನೂ ತೋರಿಸುತ್ತದೆ. ಆ ಮೂಲಕ ಅವರು 'ಜಾತಿ, ವರ್ಗ ಮತ್ತು ಲಿಂಗ', 'ಪ್ರತಿ–ಸಂಸ್ಕೃತಿ' ಹಾಗೂ 'ಸ್ತ್ರೀವಾದ ಮತ್ತು ಸ್ತ್ರೀವಾದಿ ಸಿದ್ಧಾಂತಗಳು' ಮುಂತಾದ ಪತ್ರಿಕೆಗಳನ್ನು ಕಲಿಸುವ ಸಂದರ್ಭದಲ್ಲಿ ತರಗತಿಯನ್ನು ಸಾಮಾಜಿಕ ಬದಲಾವಣೆಯ ಕಣವನ್ನಾಗಿಸುತ್ತಿದ್ದರು, ಮತ್ತು ಕ್ಷೇತ್ರಕಾರ್ಯದ ತರಬೇತಿ ನೀಡುವ ವೇದಿಕೆಯನ್ನಾಗಿ ರೂಪಿಸುತ್ತಿದ್ದರು. ಯುವ ಸಮುದಾಯದಲ್ಲಿ ಹೇಗೆ ಬೆಳಕು ತುಂಬಲು ಸಾಧ್ಯ ಮತ್ತು ಸಾಮಾಜಿಕ ಪರಿವರ್ತನೆಯ ಉದ್ದೇಶಕ್ಕಾಗಿ ಅವರನ್ನು ಹೇಗೆ ಸಿದ್ಧ ಮಾಡಲು ಸಾಧ್ಯ ಎಂಬುದನ್ನು ರೇಗೆ ಸಮರ್ಥವಾಗಿ ತೋರಿಸಿಕೊಟ್ಟರು.

ಸಾಮಾಜಿಕ ಕಾರ್ಯಕರ್ತರ ನೈಜ ಜೀವನಾನುಭವ ಮತ್ತು ಸಮುದಾಯಗಳೊಂದಿಗೆ ಅವರ ಸಂಬಂಧ ಯಾವ ರೀತಿ ಸಾಮಾಜಿಕ ವಾಸ್ತವದ ಅರಿವನ್ನು ಹೆಚ್ಚಿಸುತ್ತದೆ ಎಂಬ ಅಂಶಗಳಿಗೆ ರೇಗೆ ತಮ್ಮ ತರಗತಿಗಳಲ್ಲಿ ಹೆಚ್ಚಿನ ಗಮನ ನೀಡುತ್ತಿದ್ದರು. ಸಿದ್ಧಾಂತ, ವಿಚಾರಧಾರೆ ಹಾಗೂ ರೂಢಿಗತ ಪದ್ಧತಿಗಳು ಹೇಗೆ ನಿಕಟ ಸಂಪರ್ಕ ಹೊಂದಿವೆಯೆಂದೂ ಅವರ ಚರ್ಚೆ ಕೇಂದ್ರೀಕೃತವಾಗಿರುತ್ತಿತ್ತು. ಸಾಮಾಜಿಕ ಬಿಕ್ಕಟ್ಟು ಮಹಿಳಾ ಅಧ್ಯಯನದ ಸಾಂಸ್ಥಿಕ ಮತ್ತು ಶೈಕ್ಷಣಿಕ ನ್ಯೂನತೆಗಳಲ್ಲಿ ಅಂತರ್ಗತಗೊಂಡಿದ್ದರೂ ಅದು ಜ್ಞಾನ ಉತ್ಪಾದನಾ ಸಾಮರ್ಥ್ಯ ಪಡೆದಿಲ್ಲ ಎನ್ನುವ ಮೂಲಕ ಅವರು ಭಾರತದ ಸಮಾಜ ವಿಜ್ಞಾನ ಸಮುದಾಯದ ಗಮನ ಸೆಳೆದಿದ್ದರು. ಜ್ಞಾನದ ಸಮರ್ಥನೆಗೆ ಹೊಣೆಗಾರರನ್ನು ಮಾಡುವ ಮೂಲಕ ಮತ್ತು ಜ್ಞಾನದ ಪರಿಣಾಮಗಳನ್ನು ವಿಶ್ಲೇಷಣೆಗೆ ಒಡ್ಡುವ ಮೂಲಕ ಅದರ ಉಪಯೋಗ ಹಾಗೂ ಸಾಮಾಜಿಕ ಅಸ್ತಿತ್ವವನ್ನು ಪ್ರಾಯೋಗಿಕ ನೆಲೆಯಾಗಿ ಪರಿವರ್ತಿಸಬೇಕೆಂದು ರೇಗೆ ಒತ್ತಾಯಿಸುತ್ತಿದ್ದರು.

ದಲಿತ ದೃಷ್ಟಿಕೋನ ಮತ್ತು ಸ್ತ್ರೀವಾದ ದೃಷ್ಟಿಕೋನಗಳು ಸಮಾಜಶಾಸ್ತ್ರದ ಮುಖ್ಯ ಚರ್ಚೆಗಳಿಗೆ ಸವಾಲು ಎಸೆಯುತ್ತಿವಂತಿದ್ದು ಅವನ್ನು ಶೈಕ್ಷಣಿಕ ಸಮುದಾಯಗಳ ಬಳಿ ತರಲು ರೇಗೆ ಸಂದರ್ಭ ಕಾಯುತ್ತಿದ್ದರು. ಈ ಕಾರಣದಿಂದಲೆ ಸಮಾಜಶಾಸ್ತ್ರದ ಮುಖ್ಯನೆಲೆ 'ತಾನೇ ವಿಧಿಸಿಕೊಂಡ ಪರಕೀಯ ಭಾವನೆ' ಎಂಬ ತಪ್ಪುಗ್ರಹಿಕೆಗೆ ಈಡಾಗಬೇಕಾಯಿತು. ಲಿಂಗ ಅಧ್ಯಯನ ಹಾಗೂ ಸಮಾಜಶಾಸ್ತ್ರ ನಡುವೆ ವಾಗ್ವಾದ ಆರಂಭಿಸುವ ಕಾರ್ಯದಲ್ಲಿ ಕೆಲವರಿಗೆ ಮಾತ್ರ ಅವರ ಪ್ರಾಮಾಣಿಕತನ ಅರಿಯಲು ಸಾಧ್ಯವಾಯಿತು. ವಿಶ್ವವಿದ್ಯಾಲಯ ಅಥವಾ ವಿಭಾಗದ ರಾಜಕಾರಣ ಶರ್ಮಿಳಾ ರೇಗೆಯವರನ್ನು ಬಿಟ್ಟಿರಲಿಲ್ಲ. ಅವರು ಸಮಾಜಶಾಸ್ತ್ರದ ಜ್ಞಾನಶಿಸ್ತಿಗೆ ಪರಕೀಯಳೆಂಬ ಅಪಪ್ರಚಾರ ಎದುರಿಸಬೇಕಾಯಿತು. ಮಹಿಳಾ ಅಧ್ಯಯನದಲ್ಲಿ ಬದ್ಧ ಆಸಕ್ತಿ ಹೊಂದಿದ್ದರೂ ಅವರು ಇದರಿಂದ ವಿಚಲಿತರಾದಂತೆ ಕಂಡುಬರುತ್ತಿದ್ದರು. ಈ ಸಂದರ್ಭದಲ್ಲಿ ಉಂಟಾದ ಬಿಕ್ಕಟ್ಟಿನಲ್ಲಿ ಪ್ರಾಧ್ಯಾಪಕ ಹುದ್ದೆ ತ್ಯಜಿಸಿ ಸಹ ಪ್ರಾಧ್ಯಾಪಕ ಹುದ್ದೆಯನ್ನು ಅವರು ಆಯ್ಕೆ ಮಾಡಿಕೊಂಡರು. ಈ ಪ್ರಕರಣ ಮಹಿಳಾ ಅಧ್ಯಯನದ ಬಗ್ಗೆ ಅವರಿಗಿದ್ದ ಕಾಳಜಿ–ಪ್ರೀತಿ ಎಷ್ಟರ ಮಟ್ಟಿಗಿತ್ತೆಂದು ಸಾರಿ ಹೇಳುತ್ತದೆ.

ಈ ಮಧ್ಯೆ ರೇಗೆ ತಮ್ಮ ಆರೋಗ್ಯದ ಕಡೆ ಸಂಪೂರ್ಣ ಗಮನಹರಿಸಲಾಗದೆ ಹೋದುದು ಅವರ ಅಗಲಿಕೆಗೆ ಕಾರಣವಾಯಿತು. "ಆಕೆ ನಮ್ಮನ್ನೆಲ್ಲ ದುಃಖದಲ್ಲಿ ಬಿಟ್ಟುಹೋಗಿದ್ದಕ್ಕಾಗಿ ಬಹಳ ಸಿಟ್ಟಾಗಿದ್ದೇವೆ. ರೇಗೆ ತನ್ನ ಹಿಂದೆ ಬಿಟ್ಟುಹೋಗಿರುವ ಆಸ್ತಿಗಾಗಿ ಕೃತಜ್ಞರಾಗಿದ್ದೇವೆ. ಆ ಆಸ್ತಿ ಎಂದರೆ ಮಹಿಳಾ ಅಧ್ಯಯನಕ್ಕಾಗಿ ಆಕೆ ತೆಗೆದುಕೊಂಡ ನಿಲುವು. ಇವೆಲ್ಲಕ್ಕೂ ಮಿಗಿಲಾಗಿ ಅಧ್ಯಾಪನ ವೃತ್ತಿಗಾಗಿ ಇರುವ ಆಕೆಯ ಸಾಟಿ ಇಲ್ಲದ ಒಲವು ಮತ್ತು ಪ್ರಾಮಾಣಿಕತೆ. ಆಕೆಯ ಸಹೋದ್ಯೋಗಿಗಳು, ವಿದ್ಯಾರ್ಥಿಗಳು, ಸಂಶೋಧಕರು, ವಾಸ್ತವವಾಗಿ ಅವಳನ್ನು ತಿಳಿದಿರುವ ನಮಗೆಲ್ಲ ಆಕೆ ಒಬ್ಬ ಸ್ತ್ರೀವಾದಿ ಚಿಂತಕಿ, ಕಾರ್ಯಕರ್ತೆ. ಆಕೆಯ ಬೆಳಕಿನ ದೀವಿಗೆಯನ್ನು ಹಿಡಿದು ಮುನ್ನಡೆಯುವುದೇ ಶರ್ಮಿಳಾ ರೇಗೆಗೆ ದೇಶದ ಯುವ ಜನತೆ ಸಲ್ಲಿಸುವ ನಿಜವಾದ ಶ್ರದ್ಧಾಂಜಲಿ" ಎಂಬುದು ಡಿ.ಎನ್. ಧನಗೆರೆ ಅವರ ಶ್ಲಾಘನೆಯಾಗಿದೆ.೧

ರೇಗೆ ೪೮ ವರ್ಷಗಳ ತಮ್ಮ ಜೀವಿತಾವಧಿಯಲ್ಲಿ ಅರ್ಧಭಾಗ ಪುಣೆ ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ವಿಭಾಗದಲ್ಲಿ ಕಳೆದಿದ್ದರು. ಮಹಿಳಾ ಅಧ್ಯಯನ ಕೇಂದ್ರದ ಬೋಧನೆ ಸಂಶೋಧನೆಯೊಂದಿಗೆ ಸಾಮಾಜಿಕ ಹೋರಾಟಗಳ ಸಂಘಟನೆಗಾಗಿಯೂ ತಮ್ಮ ಜೀವನ ಸವೆಸಿದ್ದರು.

**ಬಹುಶಿಸ್ತೀಯ ಅಧ್ಯಯನ ಯೋಜನೆಗಳು**

ಪುಣೆ ವಿಶ್ವವಿದ್ಯಾಲಯದ ಕ್ರಾಂತಿಜ್ಯೋತಿ ಸಾವಿತ್ರಿಬಾಯಿ ಫುಲೆ ಮಹಿಳಾ ಅಧ್ಯಯನ ಕೇಂದ್ರದ ನಿರ್ದೇಶಕರಾದ ಭಾಗವತ ವಿದ್ಯುತ್‌ರು ನಿವೃತ್ತರಾದಾಗ ಆ ಕೇಂದ್ರದ ಚಟುವಟಿಕೆಗಳು ಮಂದಗತಿ ಹಿಡಿಯಬಹುದೆಂದು ಅನೇಕರು ತಿಳಿದಿದ್ದರು. ಆದರೆ ಶರ್ಮಿಳಾ ರೇಗೆಯ ಬಹುಮುಖಿ ಚಟುವಟಿಕೆಗಳು ಕೇಂದ್ರವನ್ನು ಮತ್ತಷ್ಟು ಚುರುಕುಗೊಳಿಸಿದವು. ಅವರು ತಮ್ಮ ರೀ ಇಮೆಜಿಂಗ್ ಹೈಯರ್ ಎಜ್ಯುಕೇಶನ್ ಆನ್ ದಿ ಸ್ಟೈಟ್ ಆಫ್ ವುಮನ್ ಸ್ಟಡೀಸ್ (೨೦೦೮–೧೨) ಎಂಬ ಪ್ರಮುಖ ಯೋಜನೆಯನ್ನು ಯಶಸ್ವಿಗೊಳಿಸಲು ನಿಶ್ಚಯಿಸಿಕೊಂಡಿದ್ದರು. ಈ ಯೋಜನೆಗಾಗಿ ಮಹಿಳಾ ಅಧ್ಯಯನ ಕೇಂದ್ರ ನವಾಜಭಾಯಿ ರತನ್ ಟಾಟಾ ಟ್ರಸ್ಟ್ ವತಿಯಿಂದ ೮,೭೧೫,೦೦೦ ರೂಪಾಯಿಗಳ ಭಾರಿ ಮೊತ್ತದ ಅನುದಾನ ಪಡೆದುಕೊಂಡಿತ್ತು. ಇದರ ಅವಧಿ ೩ ವರ್ಷಗಳಾಗಿತ್ತು. ಈ ಮಧ್ಯೆ ರೇಗೆ ಬೆಂಗಳೂರು ಕೇಂದ್ರವೊಂದರ ಜೊತೆ ಬ್ರಿಜ್ ಕೋರ್ಸು ಅಭಿವೃದ್ಧಿ ಪಡಿಸಿದರು. ಸ್ಕ್ಯಾನರ್ ಅಡಿಯಲ್ಲಿ

ಭಾರತೀಯ ಸಮಾಜಶಾಸ್ತ್ರದ ವಿಮರ್ಶಾತ್ಮಕತೆ ಮತ್ತು ಉದ್ಯೋಗಾರ್ಹತೆ ಸಂಯೋಜಿಸುವ ಮಾಡ್ಯುಲ್ ತರಬೇತಿ ಯೋಜನೆಯನ್ನು ನಿಗದಿತ ಅವಧಿಯಲ್ಲಿ ಆರಂಭಿಸುವ ಮೂಲಕ ಅನೇಕ ಹೊಸ ಯೋಜನೆಗಳನ್ನು ಜಾರಿಗೆ ತಂದರು. ಈ ಮೂಲಕ ಲಿಂಗ ಸಂಬಂಧಿ ಅಧ್ಯಯನ, ದಲಿತ ಅಧ್ಯಯನ, ಲೈಂಗಿಕತೆ ಮತ್ತು ಶಾರೀರಿಕ ಅಧ್ಯಯನ ಹಾಗೂ ಸಾಂಸ್ಕೃತಿಕ ಅಧ್ಯಯನಗಳ ಬಹುಶಿಸ್ತೀಯ ನೆಲೆಯಲ್ಲಿ ಜಾತಿ ಮತ್ತು ಲಿಂಗ ಬಗ್ಗೆ ಜಾಗೃತಿ ಹುಟ್ಟಿಸುವ ಬಲವಾದ ಇಚ್ಛೆ ಹುಟ್ಟುಹಾಕಿದರು.

ಎರಡು ವರ್ಷಗಳ ಹಿಂದೆ ಜುಬಾನ್ ಪಬ್ಲಿಕೇಶನ್‌ನಿಂದ 'ಓರಲ್ ಹಿಸ್ಟರೀಸ್ ಆಫ್ ವುಮನ್ಸ್ ಮೂವಮೆಂಟ್' ಎಂಬ ಯೋಜನೆಗೆ ರೇಗೆ ಸಹಾಯಧನ ಪಡೆದಿದ್ದರು. ೨೦೧೩ರಲ್ಲಿ ಇಂಡಿಯನ್ ಕೌನ್ಸಿಲ್ ಆಫ್ ಸೋಶಿಯಲ್ ಸೈನ್ಸ್ ರಿಸರ್ಚ್ (ಐಸಿಎಸ್‌ಎಸ್‌ಆರ್) ಉನ್ನತ ಶಿಕ್ಷಣದಲ್ಲಿ ಸಮಾನತೆ ಹಾಗೂ ಗುಣಮಟ್ಟ ಸಂಯೋಜಿಸುವ ಮಾನದಂಡ ಗುರುತಿಸಲು ೨೦೧೩–೧೫ರ ಅವಧಿಗೆ ರೇಗೆ ಇನ್ನೊಂದು ಅನುದಾನ ನೀಡಿತ್ತು. ೨೦೧೩ ಜುಲೈ ತಿಂಗಳಲ್ಲಿ ಶರ್ಮಿಳಾ ಅಕಾಲಿಕ ನಿಧನರಾದುದರಿಂದ ಈ ಯೋಜನೆಗಳನ್ನು ಮಹಿಳಾ ಅಧ್ಯಯನ ಕೇಂದ್ರದ ಆಕೆಯ ಸಹೋದ್ಯೋಗಿಗಳಾದ ಅನಘಾ ತಾಂಜಿ ಮತ್ತು ಸ್ವಾತಿ ದೆಹದ್ರಾಯ್‌ಗೆ ವಹಿಸಿಕೊಡಲಾಯಿತು.

ವಿದ್ಯಾರ್ಥಿಗಳು ಮತ್ತು ಸಂಶೋಧನಾ ಸಹಾಯಕರು ತಮ್ಮ ಅಧ್ಯಯನದಲ್ಲಿ ಶರ್ಮಿಳಾ ರೇಗೆಯ ನಿರೀಕ್ಷಿತ ಗುಣಮಟ್ಟ ತಲುಪದಿದ್ದರೂ ಅವರನ್ನು ಸಹಿಸಿಕೊಳ್ಳುತ್ತಿದ್ದರು. ಜ್ಞಾನವನ್ನು ಅಭಿವೃದ್ಧಿಗೊಳಿಸಲು ಮತ್ತು ಮುಂದಿನ ತಲೆಮಾರಿಗೆ ಸಾಗಿಸಲು ಅವರು ಇಷ್ಟಪಡುತ್ತಿದ್ದರು. ಶಿಸ್ತು ಅವರಿಗೊಂದು ಬಗೆಯ ರಾಜಕಾರಣವೇ ಆಗಿತ್ತೆಂದು ರೇಗೆ ಬಗ್ಗೆ ದಲಿತ ಸ್ಕಾಲರ್ ಚಿಟ್ಟಿಬಾಬು ಪಡವಲ್ ದ ಹಿಂದು ಪತ್ರಿಕೆಯಲ್ಲಿ ಬರೆದಿದ್ದಾರೆ.

**ಕ್ರಾಂತಿ ಜ್ಯೋತಿ ಸಾವಿತ್ರಿಬಾಯಿ ಫುಲೆ ಮಹಿಳಾ ಅಧ್ಯಯನ ಕೇಂದ್ರ**

ಮಹಿಳಾ ಅಧ್ಯಯನ ಕೇಂದ್ರದಲ್ಲಿ ಶರ್ಮಿಳಾ ರೇಗೆ ಜ್ಞಾನಶಾಸ್ತ್ರ ಮತ್ತು ಭಾಷೆಯ ನಡುವೆ ತಾವೊಬ್ಬ ಕೊಂಡಿಯಂತೆ ಕೆಲಸ ಮಾಡಿದ್ದನ್ನು ಕೆಲವೇ ಜನರು ಬಲ್ಲರು. ಭಾರತದ ಉನ್ನತ ಶಿಕ್ಷಣದ ಗುಣಾತ್ಮಕತೆ ಮತ್ತು ಸಮಾನತೆ ಕುರಿತು ಹಲವಾರು ವರದಿಗಳು ಬರುತ್ತಿದ್ದವು. ಈ ವರದಿಗಳ ಪೂರ್ವದಲ್ಲಿ ಕ್ರಾಂತಿ ಜ್ಯೋತಿ ಸಾವಿತ್ರಿಬಾಯಿ ಫುಲೆ ಮಹಿಳಾ ಅಧ್ಯಯನ ಕೇಂದ್ರದಲ್ಲಿ ರೇಗೆಯವರು ತಮ್ಮ ಸಾರಥ್ಯದಲ್ಲಿ ಗುಣಾತ್ಮಕತೆ ಜೊತೆಗೆ ಸಮಾನತೆ ತರಲು ಹಲವು ಪ್ರಯೋಗಗಳನ್ನು ತಮ್ಮದೆ ಭೂಮಿಕೆಯಲ್ಲಿ ಮಾಡುತ್ತಿದ್ದರು. ಈ ಕೇಂದ್ರವನ್ನು ಸಾಮರ್ಥ್ಯ ಅಭಿವೃದ್ಧಿ ಕೇಂದ್ರವನ್ನಾಗಿ ಮಾಡಲು ಮತ್ತು ಸ್ತ್ರೀವಾದಿ ಮೌಲ್ಯಗಳಿಗೆ ಮಾರ್ಗದರ್ಶನ ನೀಡಲು ಅವರು ಸಾಕಷ್ಟು ಶ್ರಮಿಸುವ ಮೂಲಕ ಮಹಿಳಾ ಅಧ್ಯಯನ ಜ್ಞಾನಶಿಸ್ತಿಗೆ ತನ್ನದೇ ಕೊಡುಗೆ ನೀಡಿದರು.

ಉನ್ನತ ಶಿಕ್ಷಣದಲ್ಲಿ ಮಹಿಳಾ ಅಧ್ಯಯನಕ್ಕಿರುವ ಸವಾಲುಗಳೇನು? ಮಹಿಳಾ ಅಧ್ಯಯನ ಅಭ್ಯಸಿಸುತ್ತಿರುವ ವಿದ್ಯಾರ್ಥಿಗಳು ಬಯಸುವ ಬದಲಾವಣೆ ಮತ್ತು ಯುಜಿಸಿ ಮಹಿಳಾ ಅಧ್ಯಯನ ಕೇಂದ್ರದ ಮಾರ್ಗಸೂಚಿಗಳ ಜೊತೆಗೆ ರಾಜ್ಯದ ವಿಶ್ವವಿದ್ಯಾಲಯಗಳ ರಾಜಕಾರಣಗಳಿಂದಾಗಿ ಮಹಿಳಾ ಅಧ್ಯಯನ ಓದಿದ ವಿದ್ಯಾರ್ಥಿಗಳು ಎದುರಿಸುತ್ತಿರುವ ಉದ್ಯೋಗ ಅವಕಾಶಗಳ ನಿರಾಕರಣೆ ಸ್ವರೂಪ ಯಾವುದು? ಮಹಿಳಾ ಅಧ್ಯಯನ ವಿರೋಧಿಸುವ ವಿದ್ಯಾರ್ಥಿಗಳ ಸಿಟ್ಟು ಮತ್ತು ಅವರು ಸಾಮಾಜಿಕ ಪರಿವರ್ತನೆಯಲ್ಲಿ ವಹಿಸುವ ಪಾತ್ರವನ್ನು ಮರುವ್ಯಾಖ್ಯಾನಿಸಬೇಕಾದ ಅಗತ್ಯವಿದೆ ಎಂದು ಶರ್ಮಿಳಾ ರೇಗೆ ತಿಳಿಸುತ್ತಿದ್ದರು.

೧೯೮೭ರ ಅವಧಿಯಲ್ಲಿ 'ಭಾರತದ ಉನ್ನತ ಶಿಕ್ಷಣದಲ್ಲಿನ ಸವಾಲುಗಳು' ಕುರಿತು ರೇಗೆ ಅವರ ತಂಡ ಮಾಡಿದ ವಿಭಿನ್ನ ಆಲೋಚನೆ/ ಕ್ರಿಯಾತ್ಮಕ ಕೆಲಸಗಳು ಮೈಲಿಗಲ್ಲಾಗಿವೆ. ೧೯೯೫ರಲ್ಲಿ ಮಹಿಳಾ ಅಧ್ಯಯನ ಕೇಂದ್ರ ಇಂಗ್ಲಿಶ್ ಮತ್ತು ಮರಾಠಿ ಭಾಷೆಯಲ್ಲಿ ಸ್ನಾತಕೋತ್ತರ ಸರ್ಟಿಫಿಕೇಟ್ ಕೋರ್ಸ್ ಆರಂಭಿಸಿತು. ಅದು ಸ್ತ್ರೀವಾದಿ ಸಿದ್ಧಾಂತ (ಪ್ರಾದೇಶಿಕ ಸಾಮಾಜಿಕ ಇತಿಹಾಸ, ಸಂಸ್ಕೃತಿ ಮತ್ತು ರಾಜಕೀಯ, ಅಭಿವೃದ್ಧಿ ಅಧ್ಯಯನ) ವಿಷಯಗಳನ್ನು ಒಳಗೊಂಡಿತ್ತು. ಈ ಕೋರ್ಸ್ ಭಾಷೆ, ಪ್ರದೇಶ ಮತ್ತು ಮಹಿಳಾ ಅಧ್ಯಯನದ ಪ್ರಯೋಗವನ್ನು ಸುಸ್ಥಿರವಾಗಿ ಚರ್ಚಿಸಲು ಪ್ರೋತ್ಸಾಹಿಸಿತು. ೧೯೯೮ರಲ್ಲಿ ಈ ಕೇಂದ್ರ ಸ್ವಾಯತ್ತತೆ ಪಡೆದು ಮತ್ತೊಂದು ಶಿಸ್ತುಬದ್ಧ ವಿಭಾಗವಾಯಿತು. ಶರ್ಮಿಳಾ ಅದನ್ನು 'ಒಂದು ಜ್ಞಾನಶಿಸ್ತಿನ ಕಳೆದುಕೊಳ್ಳುವಿಕೆ' ಎಂದು ಕರೆದರು. ಯುಜಿಸಿ ೨೦೦೦ರ ಆರಂಭದಲ್ಲಿ ಮಹಾವಿದ್ಯಾಲಯಗಳು ವೃತ್ತಿಪರ/ ಪ್ರಾಯೋಗಿಕ ಕೋರ್ಸ್‌ಗಳನ್ನು ಪ್ರಾರಂಭಿಸಲು ಒತ್ತಡ ತಂದಿತು. ಈ ಅವಕಾಶವನ್ನು ಉಪಯೋಗಿಸಿಕೊಂಡ ಕೇಂದ್ರ ಬೋಧನೆಯಲ್ಲಿ ಮಹಿಳಾ ಅಧ್ಯಯನ ಆರಂಭಿಸುವುದರ ಜೊತೆಗೆ ಗ್ರಾಮೀಣ ಮತ್ತು ನಗರ ಪ್ರದೇಶದ ಮಹಾವಿದ್ಯಾಲಯಗಳಲ್ಲಿ ಮಹಿಳೆ ಮತ್ತು ಅಭಿವೃದ್ಧಿ ಎಂಬ ಮೂರು ತಿಂಗಳ ಸರ್ಟಿಫಿಕೇಟ್ ಕೋರ್ಸನ್ನು ಪದವಿ ಪೂರ್ವ ಮತ್ತು ಪದವಿ ಪಡೆದಿರುವ ಮಹಿಳೆಯರಿಗಾಗಿ ಪ್ರಾರಂಭಿಸಿತು. ೨೦೦೨ರಲ್ಲಿ ಪುಣೆ ವಿಶ್ವವಿದ್ಯಾಲಯ ಕ್ರೆಡಿಟ್ ವ್ಯವಸ್ಥೆಯನ್ನು ಅಳವಡಿಸಿಕೊಂಡಾಗಲೂ ಕೇಂದ್ರ ತನ್ನ ಎಲ್ಲ ಶಿಸ್ತುಗಳಲ್ಲಿ ಮಹಿಳಾ ಅಧ್ಯಯನವನ್ನು ಅಳವಡಿಸುವ ಮೂಲಕ ಮಹಿಳಾ ಅಧ್ಯಯನದ ಪ್ರಸ್ತುತತೆ ಮತ್ತು ಶೈಕ್ಷಣಿಕ ಸಾಮರ್ಥ್ಯವನ್ನು ಸಾಬೀತು ಮಾಡಿತು.

೨೦೦೮ರಲ್ಲಿ ಉನ್ನತ ಶಿಕ್ಷಣದಲ್ಲಿ ಸಂದಿಗ್ಧ ಸ್ಥಿತಿ ಅವರಿಸಿಕೊಂಡಿತು. ಆ ಸಂದರ್ಭದಲ್ಲಿ ಮಾನವಿಕ ಅಧ್ಯಯನ ಮತ್ತು ಸಮಾಜ ವಿಜ್ಞಾನಗಳಲ್ಲಿ ಮಹಿಳಾ ಅಧ್ಯಯನ ಚಿಂತನಾಕ್ರಮವನ್ನು ಮರುಕಟ್ಟಲು ಈ ಕೇಂದ್ರ ಯೋಚಿಸಿತು. 'ಅವಕಾಶ' ಮತ್ತು 'ಸೀಮಿತತೆ' ಒಂದು ಸಂಸ್ಥೆಯನ್ನು ಪಾರ್ಶ್ವವಾಯು ಪೀಡಿತವನ್ನಾಗಿ ಮಾಡುತ್ತದೆಂದು ಅರಿತು ಕೇಂದ್ರ ವಿಶಾಲದೃಷ್ಟಿಕೋನ ಒಳಗೊಳ್ಳುವ ಕಾರ್ಯ ಯೋಜನೆಗಳಿಗೆ ಶರ್ಮಿಳಾ ಕಾರಣೀಭೂತರಾದರು. ಕ್ರಾಂತಿಜ್ಯೋತಿ ಸಾವಿತ್ರಿಬಾಯಿ ಫುಲೆ ಮಹಿಳಾ ಅಧ್ಯಯನ ಕೇಂದ್ರವನ್ನು ಇಂದು ಭಾರತದಲ್ಲಿ ತನ್ನ ಅನನ್ಯತೆ ಕಾಯ್ದುಕೊಂಡ ಸಂಸ್ಥೆಯಾಗಿ ಗುರುತಿಸಲಾಗುತ್ತಿದೆ. ಅದರ ಬಹುಪಾಲು ಶ್ರೇಯಸ್ಸು ರೇಗೆ ಸಲ್ಲುತ್ತದೆ.

**ಶೈಕ್ಷಣಿಕ ಸಮಿತಿಗಳಲ್ಲಿ ಶರ್ಮಿಳಾ ರೇಗೆ**

ಶರ್ಮಿಳಾ ರೇಗೆ ಶೈಕ್ಷಣಿಕ ಸಮಿತಿಗಳಲ್ಲಿ ಕೆಲಸ ಮಾಡಲು ಇಷ್ಟಪಡುತ್ತಿರಲಿಲ್ಲವಾದರೂ ಭಾರತದಲ್ಲಿ ಮಹಿಳಾ ಅಧ್ಯಯನ ಕೇಂದ್ರಗಳನ್ನು ಕಟ್ಟುವ ಸಲುವಾಗಿ ೨೦೦೮ರ ಅವಧಿಯಲ್ಲಿ ಭಾರತದ ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳಲ್ಲಿ ಮಹಿಳಾ ಅಧ್ಯಯನ ಕೇಂದ್ರಗಳ ಅಭಿವೃದ್ಧಿ ಮಾರ್ಗಸೂಚಿ ರಚನೆಯ ಸ್ಥಾಯಿ ಸಮಿತಿ ಸದಸ್ಯೆಯಾಗಿ ಹಾಗೂ ಐಸಿಎಸ್‌ಎಸ್‌ಆರ್‌ನ ಸದಸ್ಯೆಯಾಗಿ (೨೦೦೫–೦೮ ಅವಧಿಗೆ) ಕಾರ್ಯನಿರ್ವಹಿಸಿದರು.

ಯುಜಿಸಿ (ಸ್ಕಾಲರ್‌ಶಿಪ್ ಹಾಗೂ ಫೆಲೋಶಿಪ್) ಸಂಶೋಧನಾ ಆಯ್ಕೆ ಸಮಿತಿಯ ಸದಸ್ಯೆಯಾಗಿ ಮತ್ತು ಯುಜಿಸಿ ಸಾಮಾಜಿಕ ಹೊರಗುಳಿಯುವಿಕೆ ಮತ್ತು ಒಳಗೊಳ್ಳುವಿಕೆ ಸಮಿತಿಯಲ್ಲಿ ಹಾಗೂ ಇಂಡಿಯನ್ ಜರ್ನಲ್ ಆಫ್ ಜಂಡರ್ ಸ್ಟಡೀಸ್ ಸಂಪಾದಕ ಮಂಡಳಿಯಲ್ಲಿ ಕ್ರಿಯಾಶೀಲ ಸದಸ್ಯಳಾಗಿ ಕೆಲಸ ಮಾಡಿದ್ದಾರೆ. ನ್ಯಾಷನಲ್ ಕೌನ್ಸಿಲ್ ಆಫ್ ಎಜ್ಯುಕೇಶನ್ ರಿಸರ್ಚ್ ಆ್ಯಂಡ್ ಟ್ರೇನಿಂಗ್' ಸಮಿತಿ; ಎಸ್.ಆರ್.ಎಂ ವಿಶ್ವವಿದ್ಯಾಲಯ, ಮೋದಿ ನಗರ ಕ್ಯಾಂಪ್ ಉತ್ತರ ಪ್ರದೇಶ; ಇಂಡಿಯನ್ ಇನ್‌ಸ್ಟಿಟ್ಯೂಟ್

ಆಫ್ ಅಡ್ವಾನ್ಸ್ಡ್ ಸ್ಟಡಿ, ಶಿಮ್ಲಾ ಸಂಸ್ಥೆಗಳ ಜೊತೆಗೂಡಿ ಕಾರ್ಯನಿರ್ವಹಿಸಿದ್ದಾರೆ.

ಶರ್ಮಿಳಾ ರೇಗೆ ಅಪ್ರತಿಮ ವಿದ್ವತ್ ಕಾರ್ಯಗಳಿಗಾಗಿ ಅನೇಕ ಪ್ರಶಸ್ತಿ, ಗೌರವಗಳು ಸಂದಿವೆ. ಮದ್ರಾಸ್ ಅಭಿವೃದ್ಧಿ ಅಧ್ಯಯನ ಸಂಸ್ಥೆ ಅಭಿವೃದ್ಧಿ ಅಧ್ಯಯನಕ್ಕೆ ನೀಡುವ ಮ್ಯಾಲ್ಕಮ್ ಆದಿಶೇಷಯ್ಯ (Malcolm Adiseshiah) ಪ್ರಶಸ್ತಿಯನ್ನು ಶರ್ಮಿಳಾ ರೇಗೆ ಅವರಿಗೆ ೨೦೦೬ರಲ್ಲಿ ನೀಡಿ ಗೌರವಿಸಿದೆ. ಆಂಧ್ರಪ್ರದೇಶ ಸರ್ಕಾರ ಶಿಕ್ಷಣದಲ್ಲಿ ಅಗಾಧ ಸೇವೆ ಸಲ್ಲಿಸಿದವರಿಗೆ ಕೊಡಮಾಡುವ ಜಿ ರಾಮ್ ರೆಡ್ಡಿ ಅವಾರ್ಡ್ ೨೦೧೨ರಲ್ಲಿ ರೇಗೆ ಅವರಿಗೆ ಬಂದಿದೆ. ಬೆಂಗಳೂರಿನ ಇನ್‌ಸ್ಟಿಟ್ಯೂಟ್ ಫಾರ್ ಸೋಶಿಯಲ್ ಆ್ಯಂಡ್ ಇಕಾನಾಮಿಕ್ ಚೇಂಜ್ ಸಂಸ್ಥೆಯ ಅಜೀವ ಸದಸ್ಯತ್ವ ರೇಗೆ ಲಭ್ಯವಾಯಿತು. ಅವರನ್ನು ಅನೇಕ ಪ್ರಶಸ್ತಿ ಹಾಗೂ ಗೌರವ ಫಲಕ ನೀಡಿ ಸನ್ಮಾನಿಸಲಾಗಿದೆ.

ರೇಗೆ ಅವರನ್ನು ಅಂಬೇಡ್ಕರ್ ಮೆಮೋರಿಯಲ್ ಉಪನ್ಯಾಸ ನೀಡಲು ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಸೋಶಿಯಲ್ ಸೈನ್ಸ್, ಮುಂಬಯಿ (೨೦೦೯-೧೦) ಮತ್ತು ನ್ಯೂಡೆಲ್ಲಿಯ ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ ಜಂಟಿಯಾಗಿ ಆಹ್ವಾನಿಸಿದ್ದವು. ಶರ್ಮಿಳಾ ರೇಗೆ ಹೆಸರು ಲಿಂಗಸಂಬಂಧಿ ತಜ್ಞರ ಪಟ್ಟಿಯಲ್ಲಿ ಸೇರ್ಪಡೆಗೊಂಡಿತ್ತು. ಸ್ಟೇಟಸ್ ಆಫ್ ವುಮನ್ ಇನ್ ಇಂಡಿಯಾ ಸಮಿತಿ ವರದಿಯ ಪ್ರಕಟಣೆಯ ನಂತರ ಉಷಾ ಮೆಹತಾ, ನೀರಾ ದೇಸಾಯಿ, ಲೀಲಾ ದುಬೆ, ವೀಣಾ ಮುಜುಮ್‌ದಾರ್ ಮತ್ತು ಮೈತ್ರೇಯಿ ಕೃಷ್ಣರಾಜ್ ಇವರನ್ನೆಲ್ಲ ಭಾರತದ ಮಹಿಳಾ ಅಧ್ಯಯನ ಕ್ಷೇತ್ರದಲ್ಲಿ ಪ್ರವರ್ತಕರೆಂದು ಗುರುತಿಸಲಾಗಿದೆ. ಪ್ರಸ್ತುತ ಉಮಾ ಚಕ್ರವರ್ತಿ, ಬೀನಾ ಅಗರ್‌ವಾಲ್, ಪದ್ಮಿನಿ ಸ್ವಾಮಿನಾಥನ್, ಜಶೋಧರಾ ಎ. ಬಾಗಚಿ ಮತ್ತು ಇತರರೊಂದಿಗೆ ಶರ್ಮಿಳಾ ರೇಗೆಯ ಹೆಸರೂ ಕೂಡ ನಾನ್ ಕನ್‌ಫರ್ಮಿಸ್ಟ್ ಪೇಸ್ ಸೆಟರ್ಸ್ ಅವರ ಸಾಲಿನಲ್ಲಿ (ರಾಮಕೃಷ್ಣ ಮುಖರ್ಜಿಯವರ ರೂಪಕ) ಸೇರಿಸಲಾಯಿತು. ಇಂತಹ ಅಪರೂಪದ ಬುದ್ಧಿಜೀವಿ ಜುಲೈ ೧೩, ೨೦೧೩ ರಂದು ಅಗಲಿಹೋದರು.

ಲೋಕರಂಗ ಪತ್ರಿಕೆ (೨೧ ಜುಲೈ ೨೦೧೩, ಪುಣೆ ಆವೃತ್ತಿ)ಯಲ್ಲಿ ಪ್ರಕಟವಾದ ಪ್ರತಿಮಾ ಪ್ರದೇಶಿ ಅವರ ಇತ್ತೀಚಿನ ಶ್ರದ್ಧಾಂಜಲಿ ಲೇಖನದಲ್ಲಿ ಶರ್ಮಿಳಾ ರೇಗೆ ಒಬ್ಬ ಸತ್ಯಶೋಧಕ ಚಳವಳಿಯ ಬುದ್ಧಿಜೀವಿ (ಇಂಟೆಲೆಕ್ಚುಅಲ್ ಇನ್ ದ್ ಸತ್ಯಶೋಧಕ ಮೂವಮೆಂಟ್) ಎಂದು ವರ್ಣಿಸಿದ್ದಾರೆ. ಪ್ರದೇಶಿ ಒಬ್ಬ ಸುಪ್ರಸಿದ್ಧ ದಲಿತ-ಸ್ತ್ರೀವಾದಿ ಕಾರ್ಯಕರ್ತಳಾಗಿದ್ದು ಆಕೆಯ ಮಾತು ಸಮಂಜಸವಾಗಿದೆ.

ಶರ್ಮಿಳಾ ರೇಗೆ ಸತ್ಯ ಹಾಗೂ ಜ್ಞಾನಗಳ ನಿಸ್ವಾರ್ಥ ಅನ್ವೇಷಣೆಯಲ್ಲಿ ಹೇಗೆ ಮುಂದುವರಿಯಬೇಕು ಮತ್ತು ಜನಸಾಮಾನ್ಯರ ದಿನನಿತ್ಯ ಜೀವನದಲ್ಲಿ ಜ್ಞಾನದ ಉತ್ಪಾದನೆಯನ್ನು ಹೇಗೆ ಅನ್ವಯಿಸಬೇಕು ಎಂಬುದಕ್ಕೊಂದು ಉದಾಹರಣೆಯಾಗಿದ್ದರು. ದಲಿತ ಚಳವಳಿ ಹಾಗೂ ಸ್ತ್ರೀವಾದಿ ಚಳವಳಿಗಳನ್ನು ಪ್ರಚೋದಿಸುವಲ್ಲಿ ಶರ್ಮಿಳಾರ ಸ್ತ್ರೀವಾದಿ ಬೋಧನೆ ಅಡಗಿತ್ತು. ದಲಿತ ಮತ್ತು ಲಿಂಗಸಂಬಂಧಿ ಪ್ರಶ್ನೆಗಳ ಧ್ರುವೀಕರಣವನ್ನು ತಡೆಗಟ್ಟಲು ಶರ್ಮಿಳಾ ದಣಿವಿಲ್ಲದ ಪ್ರಯತ್ನ ಮಾಡಿದರು. ದಲಿತ ಚಳವಳಿಯ ಸತ್ಯಶೋಧಕ ಕಾರ್ಯಸೂಚಿಯನ್ನು ಸಮಾಜ ವಿಜ್ಞಾನದ ಉಪನ್ಯಾಸಗಳಲ್ಲಿ ಮುಖ್ಯನೆಲೆಯಲ್ಲಿ ತರಲು ಪ್ರಯತ್ನ ಮಾಡಿದರು. ಅದನ್ನು ಸಾಧಿಸಲು ಆಕೆ ಡಾ. ಅಂಬೇಡ್ಕರ್ ಅಕಾಡೆಮಿ, ವಿದ್ರೋಹಿ ಸಾಂಸ್ಕೃತಿಕ ಚಳವಳಿ ಹಾಗೂ ಸತ್ಯಶೋಧಕ ವಿದ್ಯಾರ್ಥಿ ಸಂಘಟನೆಗಳೊಂದಿಗೆ ಸೇತುವಾಗಿ ಕೆಲಸ ಮಾಡಲು ಮುಂಚೂಣಿಯಲ್ಲಿದ್ದರು. ಈ ಸಂಘಟನೆಗಳಲ್ಲಿಯೂ ವಿಭಿನ್ನ ಸೈದ್ಧಾಂತಿಕ ಬಣಗಳಿದ್ದವು. ಅವೆಲ್ಲವೂ ವಿಶೇಷವಾಗಿ ಮಹಾರಾಷ್ಟ್ರದ ದಲಿತ ಹಾಗೂ ಸ್ತ್ರೀವಾದಿ ಚಳವಳಿಗಳು ಶರ್ಮಿಳಾರನ್ನು ಒಳಗಿನವರೆಂದು ಅರಿತು ವ್ಯವಹರಿಸಿದವೋ ಅಥವಾ ಹೊರಗಿನವರೆಂದು ತಿಳಿದವೋ ಎಂಬುದು ಗ್ರಹಿಕೆಗೆ ಸಿಗಲಾರದಷ್ಟು ಮುಖ್ಯವಾಗಿ ಹಚ್ಚಿಕೊಂಡಿದ್ದವು. ಅದಕ್ಕೆ ಇಂಗ್ಲಿಷ್ ಭಾಷೆಯ ಮೇಲಿನ ಅವರ ಹಿಡಿತವೂ ಕಾರಣವಾಗಿತ್ತು ಎಂದು ಹೇಳಬಹುದು.

**ಪಿಎಚ್.ಡಿ ಅಧ್ಯಯನ – ಸಮಾಜಶಾಸ್ತ್ರದಲ್ಲಿ ಜಂಡರ್ ಅಸೂಕ್ಷ್ಮತೆಯ ಸ್ವರೂಪ**

ಶರ್ಮಿಳಾ ರೇಗೆ ಸ್ತ್ರೀವಾದಿ ಸಿದ್ಧಾಂತಗಳನ್ನು ಗಂಭೀರವಾಗಿ ಓದಿಕೊಂಡಿದ್ದರ ಜೊತೆಗೆ ಲಿಂಗ ಅಧ್ಯಯನದಲ್ಲಿ ವಿಶೇಷ ತಜ್ಞತೆ ಗಳಿಸಿದ್ದರು. ಲಿಂಗ ದೃಷ್ಟಿಕೋನವನ್ನು ಬೋಧಿಸುವ ಸಂದರ್ಭದಲ್ಲಿ, ಅಭಿಜಾತ ಲೇಖಕರಾದ ಕೋಮ್ಟ್, ಮಾರ್ಕ್ಸ್, ಏಂಗಲ್ಸ್, ಸ್ಪೆನ್ಸರ್‌ನಿಂದ ಡರ್ಖಿಂ, ಮ್ಯಾಕ್ಸ್‌ವೆಬರ್ ಮತ್ತು ಇತರ ಸಮಕಾಲೀನ ಸಾಮಾಜಿಕ ಚಿಂತಕರ ಸೈದ್ಧಾಂತಿಕ ಸೂತ್ರಗಳನ್ನು ವಿಮರ್ಶಾತ್ಮಕವಾಗಿ ಮೌಲ್ಯಮಾಪನ ಮಾಡುತ್ತಿದ್ದರು ಮತ್ತು ಅದರೊಳಗಿನ ಲಿಂಗ ಅಸೂಕ್ಷ್ಮತೆಯನ್ನು ಗುರುತಿಸುತ್ತಿದ್ದರು. ರೇಗೆಯ ಪಿಎಚ್.ಡಿ ಮಹಾಪ್ರಬಂಧ 'ಫ್ರಮ್ ಮೇನ್‌ಸ್ಟ್ರಿಮ್ ಟು ಮೇಲ್ ಸ್ಟ್ರಿಮ್ ಸೋಶಿಯಾಲಜಿ' (ಈಡಿಂಟ ಒಚುಟ್ಟಣಡಿಜಚಿಟ ಣಂ ಒಚಿಟಜ-ಣಡಿಜಚಿಟ ಖಂಛಿಂಟಂಠಿ) ಎಲ್ಲರನ್ನು ಕೆಣಕುತ್ತಿತ್ತು. ಶರ್ಮಿಳಾ ೧೯೯೧ರಲ್ಲಿ ಮಹಿಳಾ ಅಧ್ಯಯನ ಕೇಂದ್ರವನ್ನು ಸೇರಿಕೊಂಡ ನಂತರ ಸಂಶೋಧನಾ ವಿದ್ಯಾರ್ಥಿಯಾಗಿ ತನ್ನ ಹೆಸರನ್ನು ನೋಂದಾಯಿಸಿಕೊಂಡ ಕೆಲವೇ ದಿನಗಳಲ್ಲಿ ಮಾರ್ಗದರ್ಶಕರು ನವದೆಹಲಿಯ ಐಸಿಎಸ್ಎಸ್ಆರ್ ಸಂಸ್ಥೆಗೆ ಸದಸ್ಯ ಸೆಕ್ರೆಟರಿಯಾಗಿ ಹೋಗಬೇಕಾಯಿತು. ಆ ಸಂದರ್ಭದಲ್ಲಿ ಆಕೆ ತನ್ನ ಸಂಶೋಧನಾ ಕೆಲಸ ಮೇಲ್ವಿಚಾರಣೆ ಮಾಡಲು ಮಾರ್ಗದರ್ಶಕರಿಗೆ ಆಗ್ರಹ ಮಾಡಿದರು. "ಪಿಎಚ್.ಡಿ ಶರ್ಮಿಳಾಗೆ ಹೆಚ್ಚು ಕಡಿಮೆ ಒಂದು ಸ್ವಯಂ ಕಲಿಕಾ ಪ್ರಕ್ರಿಯೆಯಂತಾಗಿತ್ತು. ಇದನ್ನು ಆಕೆ ಪರಿಪಕ್ವತೆಯಿಂದಲೇ ನಿರ್ವಹಿಸಿದರು. ಮಾರ್ಗದರ್ಶಕರಿಗೆ ಐಸಿಎಸ್ಎಸ್ಆರ್‌ದಲ್ಲಿನ ಆಡಳಿತಾತ್ಮಕ ಕಾರ್ಯದ ಒತ್ತಡದಿಂದಾಗಿ ಆಕೆಯ ಅಧ್ಯಾಯಗಳನ್ನು ಪರಿಶೀಲಿಸುವ ಹಾಗೂ ಅವುಗಳನ್ನು ವಿಮರ್ಶಿಸುವ, ಹಿಂದಿರುಗಿಸುವ ಕೆಲಸಗಳಲ್ಲಿ ಸಾಕಷ್ಟು ವಿಳಂಬವೂ ಆಗುತ್ತಿತ್ತು. ಆದರೆ ರೇಗೆ ಇದಕ್ಕಾಗಿ ಮಾರ್ಗದರ್ಶಕರ ಬಗ್ಗೆ ಎಂದೂ ಅಸಹನೆ ತೋರಿಸಲಿಲ್ಲ. ರೇಗೆಯ ಅಧ್ಯಾಯಗಳನ್ನು ಓದಿ ತಿದ್ದುವಾಗಲೇ ಮಾರ್ಗದರ್ಶಕರಿಗೆ ಆಕೆಯ ಪ್ರಮುಖ ಚರ್ಚೆಗಳ ನೆಲೆ-ಬೆಲೆ ಹಾಗೂ ಸ್ತ್ರೀವಾದಿ ಸೈದ್ಧಾಂತಿಕ ಉಪನ್ಯಾಸಗಳ ಪರಿಚಯವಾಗಿತ್ತು" ಎಂದು ಆಕೆಯ ಮಾರ್ಗದರ್ಶಕರಾಗಿದ್ದ ಡಿ.ಎನ್. ಧನಗರೆ ಉಲ್ಲೇಖಿಸುತ್ತಾರೆ.೨

ಶರ್ಮಿಳಾ ಬಗ್ಗೆ ಮಾರ್ಗದರ್ಶಕರ ಒಂದೇ ಒಂದು ದೂರೆಂದರೆ, "ಆಕೆ ಪಿಎಚ್.ಡಿ ಪ್ರಬಂಧವನ್ನು ಎಂದೂ ಪರಿಷ್ಕರಿಸಲಿಲ್ಲ, ಪುಸ್ತಕವಾಗಿ ಪ್ರಕಟಿಸಲಿಲ್ಲ" ಎನ್ನುವುದು೩. ೧೯೯೫ರಲ್ಲಿ ಅವರು ಪಿಎಚ್.ಡಿ ಪದವಿ ಪಡೆದ ನಂತರ ತಮ್ಮ ಗಂಭೀರ ಮತ್ತು ವಿಮರ್ಶಾತ್ಮಕ ಲೇಖನಗಳಿಂದ ಸ್ಕಾಲರ್ ಆಗಿ ಪರಿಚಿತರಾದರು. ಆವರ ಪಾಲಿಗೆ ಪ್ರಕಟಣೆಯೊಂದೆ ತಮ್ಮ ಜೀವನದ ಅಂತಿಮ ಗುರಿಯಾಗಿರಲಿಲ್ಲ. ಅದು ಶೈಕ್ಷಣಿಕ ಚಟುಟಿಕೆಗಳಿಗೊಂದು ಪರಿಣಾಮಕಾರಿ ಸಾಧನವಾಗಿತ್ತು. ಉಪನ್ಯಾಸಕಿ ಹುದ್ದೆಯಿಂದ ಬಡ್ತಿ ಹೊಂದಿ ನೇರವಾಗಿ ಸಮಾಜಶಾಸ್ತ್ರ ವಿಭಾಗದ ಅಧ್ಯಕ್ಷೆ ಮತ್ತು ಪ್ರಾಧ್ಯಾಪಕರಾಗಿದ್ದ ರೇಗೆ ತಾನು ಹೊಂದಿದ್ದ ಹುದ್ದೆಯನ್ನು ತೊರೆಯದಂತೆ ಗುರುಗಳಾದ ಡಿ. ಎನ್. ಧನಗರೆ ನೀಡಿದ್ದ ಸಲಹೆಯನ್ನು ರೇಗೆ ಸ್ವೀಕರಿಸಲಿಲ್ಲ, ತಾನು ನಂಬಿದ್ದ ಮೌಲ್ಯ ಮತ್ತು ತತ್ವಗಳನ್ನು ಬಿಟ್ಟುಕೊಟ್ಟು ಯಾವುದರೊಂದಿಗೂ ರಾಜಿ ಮಾಡಿಕೊಳ್ಳುತ್ತಿರಲಿಲ್ಲ. ವಿಭಾಗದ ಅಧ್ಯಕ್ಷೆ ಮತ್ತು ಪ್ರಾಧ್ಯಾಪಕ

ಹುದ್ದೆಯನ್ನು ಅವರು ತೊರೆಯದೆ ಇದ್ದಿದ್ದರೆ, ಮಹಿಳಾ ಅಧ್ಯಯನ ಕೇಂದ್ರವನ್ನು ಸಮಾಜಶಾಸ್ತ್ರದ ವಿಭಾಗದಿಂದ ಬೇರ್ಪಡಿಸುವ ಕ್ರಮ ತಪ್ಪಿಸಬಹುದಿತ್ತು, ಮತ್ತು ತನ್ನ ಜೀವನದ ಮುಖ್ಯ ಗುರಿಯೆಂದು ತಿಳಿದಿದ್ದ ಜಂಡರ್ ಮತ್ತು ದಲಿತ ಅಧ್ಯಯನಗಳನ್ನು ಸಮಾಜಶಾಸ್ತ್ರದೊಂದಿಗೆ ಜೋಡಿಸಬಹುದಿತ್ತು. ರೇಗೆ ವಿಭಾಗದ ಅಧ್ಯಕ್ಷೆ ಮತ್ತು ಪ್ರಾಧ್ಯಾಪಕ ಹುದ್ದೆ ತೊರೆದು ಮಹಿಳಾ ಅಧ್ಯಯನ ವಿಭಾಗಕ್ಕೆ ತನ್ನನ್ನು ಸಮರ್ಪಿಸಿಕೊಳ್ಳುವ ಮೂಲಕ ಅದೊಂದು ಸ್ವತಂತ್ರ ವಿಭಾಗವಾಗಿ ಆರಂಭವಾಗಲು ನಾಂದಿ ಹಾಡಿದರು. ಸಮಾಜಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಹುದ್ದೆ ಬದಲಿಗೆ ಮಹಿಳಾ ಅಧ್ಯಯನ ಕೇಂದ್ರದ ಸಹ ಪ್ರಾಧ್ಯಾಪಕ ಹುದ್ದೆ ಆಯ್ಕೆ ಮಾಡಿಕೊಂಡರು. ಈ ಘಟನೆ ತಮ್ಮ ಜೀವನದಲ್ಲವರು ಯಾವ ವಿಷಯಗಳಿಗೆ ಪ್ರಾಮುಖ್ಯತೆ ನೀಡಿದ್ದರೆಂಬುದನ್ನು ತಿಳಿಸುತ್ತದೆ. ರೇಗೆ ಎಂದಿಗೂ ವೈಯಕ್ತಿಕ ಆಸಕ್ತಿ ಮತ್ತು ವೃತ್ತಿಪರ ಆಸಕ್ತಿ ಬೇರೆಯಾಗಿರಲಿಲ್ಲ. ರೇಗೆ ಶಿಸ್ತುಬದ್ಧ ಮತ್ತು ನಿಶ್ಚಿತ ಗುರಿ ಹೊಂದಿದ್ದ ವ್ಯಕ್ತಿತ್ವದವರಾಗಿದ್ದು ಮೌಲ್ಯ ಮತ್ತು ತತ್ವದ ಪ್ರಶ್ನೆ ಎದುರು ನಿಷ್ಠೂರವಾದಿಯಾಗಿರುತ್ತಿದ್ದರು.

ಶರ್ಮಿಳಾ ತಮ್ಮ ಗಂಭೀರ ವಿಮರ್ಶಾತ್ಮಕ ಲೇಖನಗಳಿಂದ ತಾವೊಬ್ಬ ಗುಣಮಟ್ಟದ ಸಂಶೋಧನಾಕಾರ್ತಿ ಎಂಬುದನ್ನು ಸಾಬೀತು ಮಾಡಿದರು. ಎಂದಿಗೂ ತಾವು ನಂಬಿದ್ದ ಮೌಲ್ಯ, ತತ್ವ ತೊರೆದು ಅಧಿಕಾರದ ಬೆನ್ನ ಹಿಂದೆ ಬೀಳಲಿಲ್ಲ. ಜಂಡರ್ ಅಧ್ಯಯನ, ಸಮಾಜಶಾಸ್ತ್ರ ಅಧ್ಯಯನ, ದಲಿತ ಅಧ್ಯಯನಗಳಿಗೆ ತನ್ನದೇ ಆದ ಕೊಡುಗೆ ಸಲ್ಲಿಸಿದ ಅವರ ಲೇಖನಗಳು, ಸಂಪಾದಿತ ಪುಸ್ತಕಗಳು ಈ ಮೂರೂ ಅಧ್ಯಯನ ಶಿಸ್ತುಗಳಿಗೆ ಹೊಸ ಚೌಕಟ್ಟು ಹಾಕಿಕೊಟ್ಟವು. ಅವರು ಸಮಾಜಶಾಸ್ತ್ರದ ವಿದ್ಯಾರ್ಥಿಯಾಗಿದ್ದರೂ ಸ್ತ್ರೀವಾದಿ ತತ್ವದಲ್ಲಿ ನಂಬಿಕೆ ಹೊಂದಿದ್ದರು. ಮಹಿಳಾ ಅಧ್ಯಯನ ಅವರಿಗೊಂದು ಪದವಿಯಾಗಿರದೆ ಅದೊಂದು ಜೀವನ ಕ್ರಮವಾಗಿತ್ತು. ಮಹಿಳಾ ಅಧ್ಯಯನ ಹೆಸರಿನಲ್ಲಿ ನಡೆಯುತ್ತಿದ್ದ ಅರಾಜಕತೆ ಬಗ್ಗೆ ಹೆಚ್ಚು ಒತ್ತು ನೀಡದೆ ಯುವ ಜನತೆಗೆ ಆದರ್ಶವಾಗಿದ್ದರು. ಅವರ ಜೀವನ ಮೌಲ್ಯಗಳು, ಸಾಮಾಜಿಕ ಬದ್ಧತೆಯುಳ್ಳ ಸಮಾಜ ವಿಜ್ಞಾನದ ಯಾವುದೇ ಅಧ್ಯಯನಕಾರರಿಗೂ ದಾರಿದೀಪವಾಗಿದೆ.

**ಶರ್ಮಿಳಾ ರೇಗೆ ಅವರ ಲೇಖನಗಳು**

ಶರ್ಮಿಳಾ ರೇಗೆ ಅವರ ಇಪ್ಪತ್ತೊಂಬತ್ತು ಲೇಖನಗಳು ಪ್ರಕಟವಾಗಿವೆ. ಅವುಗಳಲ್ಲಿ ಕೆಲವು ರಾಷ್ಟ್ರೀಯ, ಅಂತಾರಾಷ್ಟ್ರೀಯ ಮತ್ತು ಸ್ಥಳೀಯ ಮರಾಠಿ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದರೆ, ಮತ್ತೆ ಕೆಲವು ವಿವಿಧ ಸಂಪಾದಿತ ಕೃತಿಗಳಲ್ಲಿ ಸೇರ್ಪಡೆಯಾಗಿವೆ; ಹಲವು ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ಪ್ರಬಂಧಗಳು, ನೀಡಿದ ಉಪನ್ಯಾಸಗಳು, ಅನೇಕ ಪುಸ್ತಕಗಳಿಗೆ ಬರೆದ ಮುನ್ನುಡಿಗಳು ಮತ್ತು ಪ್ರಸ್ತಾವನೆಗಳು ಸೇರಿವೆ.

೧. ಮಾಂತ್ರಿಕಗೊಳಿಸುವ ಗುರುತಿನ ಭಯ; ಸಮಾಜಶಾಸ್ತ್ರ ಮತ್ತು ಸಾಮಾಜಿಕ ಭಾಷೆಯಲ್ಲಿ ಭಾಷಾ ಪ್ರಶ್ನೆಯನ್ನು ಎದುರಿಸುವಿಕೆ. (Exorcising the Fear of Identity: Interrogating the 'Language Question" in Sociology and Sociological Language) ಸಂಪಾದಕರು ಸುಜಾತಾ ಪಟೇಲ್, 'ಡುಯಿಂಗ್ ಸೋಷಿಯಲಾಜಿ ಇನ್ ಇಂಡಿಯಾ: ಜಿನಿಯಾಲೋಜಿಸ್, ಲೊಕೇಶನ್ ಆ್ಯಂಡ್ ಪ್ರಾಕ್ಟಿಸಿಸ್', ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನವದೆಹಲಿ, ೨೦೧೧.
೨. ದಲಿತ ಸ್ತ್ರೀವಾದಿ ಭೂಮಿದೃಷ್ಟಿಯಚ್ಚಾ ದಿಶೇನೆ ಇನ್ ವಿಜಿಬಲ್ ವಿಭಿನ್ನತ್ವಾಯಚ್ಚಾ ಸಂಕಲ್ಪನೇಚಿ ಚಿಕಿತ್ಸಾ (ಮರಾಠಿ), ಸಂಪಾದಕರು ಮನೋಹರ ಜಾಧವ ಮತ್ತು ಶ್ರೀಕಾಂತ ದೇಶಮುಖ, ಡಾ. ನಾಗನಾಥ ಕೋತ್ತಾಪಲ್ಲೆ ಗೌರವಾರ್ಥ – ಸಮಕಾಲೀನ ಸಾಹಿತ್ಯ ಚರ್ಚೆ, ಪ್ರತಿಮಾ ಪ್ರಕಾಶನ, ಪುಣೆ, ಜೂನ್ ೨, ೨೦೧೦.
೩. ಸೇತು ನಿರ್ಮಿತಿ; ಜೋಡಣೆಗಾರನಾಗುವ ಕುರಿತು (Building Bridges: On Becoming a Welder – ಬ್ರಿಜ್ ಕೋರ್ಸ್ ಮ್ಯಾನುವಲ್ ಕೃತಿಗೆ ಪ್ರಸ್ತಾವನೆ), ಬಿಲ್ಡಿಂಗ್ ಬ್ರಿಜ್ಸ್: ವೇಲ್ಡಿಂಗ್ ಫುಲೆ–ಅಂಬೇಡ್ಕರೀಟ್ ಫೆಮಿನಿಸ್ಟ್ ಪೆಡಾಗೋಗಿಜ್ಸ್, ಕ್ರಾಂತಿಜ್ಯೋತಿ ಸಾವಿತ್ರಿಬಾಯಿ ಫುಲೆ ಮಹಿಳಾ ಅಧ್ಯಯನ ಕೇಂದ್ರ, ಪುಣೆ ವಿಶ್ವವಿದ್ಯಾಲಯ, ಪುಣೆ, ೨೦೧೦.
೪. ಆಯದಾನಾಚೇ 'ಭಾಷಾಂತರ' : ಭಾರತೀಯ ಸ್ತ್ರೀ ಮುಕ್ತಿ ದಿವಸ್ಸಾಚ್ಚಾ ನಿಮಿತ್ಯಾನೇ (ಮರಾಠಿ), ಬಾಯಜಾ ಪತ್ರಿಕೆ, ನವೆಂಬರ್ – ಡಿಸೆಂಬರ್ ೨೦೦೫ ಮತ್ತು ಜನವರಿ–ಫೆಬ್ರುವರಿ ೨೦೦೬ ಸಂಯುಕ್ತ ಸಂಚಿಕೆ, ಮಹಾರಾಷ್ಟ್ರ.
೫. ಸ್ತ್ರೀವಾದಿ ಸಾಹಿತ್ಯ ಸಮೀಕ್ಷಾ: ಪುನರ್ ವಿಚಾರಾಚಿ ಗರಜ್, ಬಹುಜನ ಸಾಹಿತ್ಯ–ಸಂಸ್ಕೃತಿ ಪತ್ರಿಕೆ (ಮರಾಠಿ) ವಿಶೇಷಾಂಕ, ಸತ್ಯಶೋಧಕ ದಿಶಾ, ೨೪ ಅಕ್ಟೋಬರ್ ೧೯೯೭.
೬. ಮಹಾರಾಷ್ಟ್ರತೀಲ್ ಸ್ತ್ರೀವಿಷಯಕ ಸುಧಾರಣಾವಾದಾಚೇ ಸತ್ತಾಕಾರಣ (೧೮೪೮–೧೯೫೬)(ಮರಾಠಿ) ಪುಸ್ತಕ ಪ್ರಸ್ತಾವನೆ, ಲೇಖಕರು ನಾರಾಯಣ ಭೋಸ್ಲೆ, ದ ಥೈಚಿ ಪ್ರಕಾಶನ, ಪುಣೆ, ೧೭ ಸೆಪ್ಟೆಂಬರ್ ೨೦೦೮.
೭. ದಲಿತ ಸ್ತ್ರೀವಾದಿ ನಿಲುವು (A Dalit Feminist Standpoint), ೪೭೧ನೇ ವಿಚಾರ ಸಂಕಿರಣ ಸಂಚಿಕೆ, ದಲಿತರ ಧ್ವನಿ, ದೂರದೃಷ್ಟಿ ಮತ್ತು ರಾಜಕೀಯ ಸಮರ್ಥನೆ ಎಂಬ ವಿಚಾರ ಸಂಕಿರಣ, ನವೆಂಬರ್ ೧೯೯೮.
೮. ಗಡಿನಾಡಿನ ಚರಿತ್ರೆ (Histories from the borderlands), ವಿಚಾರ ಸಂಕಿರಣ, ಸಂಪುಟ.೪೯೫, ನವೆಂಬರ್ ೨೦೦೦.
೯. ಜನಪ್ರಿಯ ಸಂಸ್ಕೃತಿ ಅರ್ಥಮಾಡಿಕೊಳ್ಳುವಿಕೆ: ಮಹಾರಾಷ್ಟ್ರದಲ್ಲಿ ಗಣೇಶ ಮೇಳ ಮತ್ತು ಸತ್ಯಶೋಧಕ ಸಮಾಜ (Understanding Popular Culture: The Satyashodhak and Ganesh Melas in Maharashtra) ಸೋಶಿಯಾಜಿಕಲ್ ಬುಲಿಟಿನ್, ಸಂಪುಟ.೪೯ (೨), ಸೆಪ್ಟೆಂಬರ್ ೨೦೦೦.
೧೦. ದಲಿತ ಸ್ತ್ರೀವಾದಿ ದೃಷ್ಟಿಕೋನದೆಡೆಗೆ ; ಭಿನ್ನತೆಯ ಸಮೀಕ್ಷೆ (ದಲಿತ ಸ್ತ್ರೀವಾದಿ ದೃಷ್ಟಿಕೋನ ಕೀ ಔರ್ : ಭಿನ್ನತಾ ಕೀ ಸಮೀಕ್ಷಾ (ಹಿಂದಿ), ಸ್ತ್ರೀಕಾಲ, ಅತಿಥಿ ಸಂಪಾದಕರು : ಅನಿತಾ ಭಾರತಿ, ಭಾಷಾಂತರ : ಅನುಪಮಾ ಗುಪ್ತಾ, ದ ಮಾರ್ಜಿನಲೈಜ್ಡ್ ಅನ್ ಇನ್ಸ್ಟಟ್ಯೂಟ್ ಫಾರ್ ಅಲ್ಟರ್‌ನೇಟಿವ್ ರಿಸರ್ಚ್ ಆ್ಯಂಡ್ ಮೀಡಿಯಾ ಸ್ಟಡೀಸ್ ಸೆಪ್ಟೆಂಬರ್ ೨೦೧೩. "ದಲಿತ ವುಮನ್ ಟಾಕ್ ಡಿಫ್‌ರೆಂಟಲಿ : ಎ ಕ್ರಿಟಿಕ್ ಆಫ್ 'ಡಿಫರನ್ಸ್' ಆ್ಯಂಡ ಟುವರ್ಡ್ಸ್ ಅ ದಲಿತ ಫೆಮಿನಿಸ್ಟ್ ಸ್ಟಾಂಡ್‌ಪಾಯಿಂಟ್ ಪೊಝಿಶನ್" (ಇಂಗ್ಲಿಷ) ಇಪಿಡ್ಬ್ಲ್ಯು ೧೯೯೮.
೧೧. ಜಾತಿ ಮತ್ತು ಲಿಂಗ ವ್ಯವಸ್ಥೆ : ಭಾರತದಲ್ಲಿ ಮಹಿಳೆಯ ಮೇಲೆ ನಡೆಯುವ ಹಿಂಸೆಗಳು (Caste and Gender: The Violence against Women in India (EUI Working Paper), ರಾಬರ್ಟ್ ಸುಚ್ಚಮನ್, ಉನ್ನತ ಅಧ್ಯಯನ ಕೇಂದ್ರ, ಯೂರೋಪ್ ವಿಶ್ವವಿದ್ಯಾಲಯ ಸಂಸ್ಥೆ, ಏಪ್ರಿಲ್ ೧೯೯೬.
೧೨. ೧೯೯೦ರಿಂದೀಚೆಗೆ ಮಹಿಳಾ ಅಧ್ಯಯನ: ಹೊಸ ನಕ್ಷೆಯ ಹುಡುಕಾಟ, ಸವಾಲುಗಳು ಮತ್ತು ಕಾರ್ಯತಂತ್ರಗಳು (Women's Studies Since the 1990s: Mapping New Conjunctures, Challenges and Strategies), ಕುಂಕುಮ್ ರಾಯ್ ಸಂಪಾದನೆಯ 'ಇನಸೈಟ್ ಆ್ಯಂಡ್ ಇಂಟರ್‌ವೈಶನ್ಸ್:

ಎಸ್ಸೇ ಇನ್ ಆನರ್ ಆಫ್ ಉಮಾ ಚಕ್ರವರ್ತಿ', ಪ್ರಿಮಸ್ ಬುಕ್ಸ್, ೨೦೧೧.

೧೩. ಜಾತಿ ಮತ್ತು ಲಿಂಗ ವ್ಯವಸ್ಥೆ : ಭಾರತದಲ್ಲಿ ಮಹಿಳೆಯ ಮೇಲೆ ನಡೆಯುವ ಹಿಂಸೆಗಳು Caste and Gender: The Violence against Women in India, ಸಂಪಾದಕರು – ಪಿ. ಜಿ. ಜೋಗಂದ್, 'ದಲಿತ ವುಮನ್: ಇಶ್ಯುಸ್ ಆ್ಯಂಡ್ ಪರ್ಸ್‌ಪೆಕ್ಟಿವ್ಸ್', ಜ್ಞಾನ ಬುಕ್ಸ್ (ಪಿ) ಲಿಮಿಟೆಡ್, ನವದೆಹಲಿ, ೧೯೯೫.

೧೪. ಭಾರತದಲ್ಲಿ ವಿಮೋಚನೆಗಾಗಿ ಸ್ತ್ರೀವಾದಿ ಜ್ಞಾನಶಾಸ್ತ್ರ ಮತ್ತು ಸಮಾಜಶಾಸ್ತ್ರ (Feminist Pedagogies and Sociology for Emancipation in India), ಸೋಶಿಯಾಲಜಿಕಲ್ ಬುಲಿಟಿನ್, ೪೪ (೨), ಸೆಪ್ಟೆಂಬರ್ ೧೯೯೫.

೧೫. ಬ್ರಾಹ್ಮಣೇತರ ಚಳವಳಿ ಸಂಪನ್ಮೂಲ (Resources on Non-Brahmin Movement), ಶರ್ಮಿಳಾ ಮತ್ತು ಪ್ರವೀಣ ಚವ್ಹಾಣ, ಇಪಿಡಬ್ಲ್ಯೂ, ಸಂಚಿಕೆ –೩೭, ನಂ.೦೪, ೨೬ ಜನೇವರಿ ೨೦೦೨.

೧೬. ಲಿಂಗ ವ್ಯವಸ್ಥೆ ದೃಷ್ಟಿಕೋನದ ಮೂಲಕ ರಾಜ್ಯನೀತಿ ಮತ್ತು ೧೨ನೆಯ ಪಂಚವಾರ್ಷಿಕ ಯೋಜನೆ (State Policy and the Twelfth Plan through a Gender Lens), ಶರ್ಮಿಳಾ ರೇಗೆ, ಜೆ. ದೇವಕಿ, ಕಲ್ಪನಾ ಕಣ್ಣಬೀರನ್, ಮ್ಯಾರಿ ಇ ಜಾನ್, ಪದ್ಮಿನಿ ಸ್ವಾಮಿನಾಥನ್, ಸಮಿತಾ ಸೇನ್, ಇಪಿಡಬ್ಲ್ಯೂ, ೨೮ ಏಪ್ರಿಲ್ ೨೦೧೨.

೧೭. ಸ್ತ್ರೀ: ಅಸಲೇಲಿ, ಧಡವಲೇಜಿ ಆಣಿ ಧಾಖವಲೇಲಿ (ಮರಾಠಿ) ಲೇಖನವನ್ನು 'ಸ್ತ್ರೀಮಿತಿ: ನಿವಡಕ ಮೀಹ್ಹೂನ್ ಸಾನ್ಯಾಜಣಿ' ಪುಸ್ತಕ ಸಂಪಾದಕರು ನಿಲಿಮಾ ಗುಂಡಿ, ಮಂಜು ಪ್ರಕಾಶನ್, ೨೦೧೦.

೧೮. ದಲಿತ ಅಧ್ಯಯನಾಚೇ ಅಧ್ಯಯನಶಾಸ್ತ್ರ: ದಲಿತ ಬೌದ್ಧಿಕತಾ ಆಣಿ ದಾಸ್ಯವಿಮೋಚನಾತ್ಮಕ ಜ್ಞಾನಶಾಸ್ತ್ರಚೇ ಪುರ್ನಲೇಖನ (ಮರಾಠಿ) ಸಮಾಜ ಪ್ರಭೋಧನ ಪತ್ರಿಕೆ, ಏಪ್ರಿಲ್ ೨೦೦೭.

೧೯. ನೈಜ ಸ್ತ್ರೀವಾದ ಮತ್ತು ದಲಿತ ಮಹಿಳೆ : ನಿರಾಕರಣೆ ಮತ್ತು ಆರೋಪ (Real Feminism and Dalit Women: Scripts of Denial and Accusation), ಇಪಿಡಬ್ಲ್ಯೂ, ಫೆಬ್ರುವರಿ ೫, ೨೦೦೦.

೨೦. ದ ಹೆಜಿಮೋನಿಕ್ ಅಪ್ರೋಪಿಯಶನ್ಸ್ ಆಫ್ ಸೆಕ್ಸುಯಾಲಿಟಿ : ಅ ಕೇಸ್ ಆಫ್ ದ ಲಾವಣಿ ಫರಪಾಮರ್ಸ್ ಆಫ್ ಮಹಾರಾಷ್ಟ್ರ ಲೇಖನವನ್ನು (The Hegemonic Appropriation of Sexuality: The Case of the Lavani Performers of Maharashtra) ಕಾಂಟ್ರಿಬ್ಯೂಶನ್ ಟು ಇಂಡಿಯನ್ ಸೋಶಿಯಾಲಜಿ, ೧೯೯೫, ೨೯:೨೩, ಸೇಜ್ ಪಬ್ಲಿಕೇಶನ್, ನವದೆಹಲಿ.

೨೧. ಮೋರ್ ದ್ಯಾನ್ ಜಸ್ಟ್ ಟ್ಯಾಕಿಂಗ್ ವುಮನ್ ಆನ್ ಟು ದ ಮ್ಯಾಕ್ರೋಪಿಚ್ಚರ್: ಫೆಮಿನಿಸ್ಟ ಕಾಂಟ್ರುಬ್ಯೂಶನ್ ಟು ಗ್ಲೋಬಲ್ಯಾಯಜೇಶನ್ ಡಿಸಕೋರ್ಸ್ (More than Just Tacking Women on to the 'Macropicture': Feminist Contributions to Globalisation Discourses), ಇಪಿಡಬ್ಲ್ಯೂ ವಿಕ್ಲಿ, ೨೫ ಅಕ್ಟೋಬರ್ ೨೦೦೩.

೨೨. ಶಿಕ್ಷಣವೆಂಬ ತೃತೀಯ ರತ್ನ: ಫುಲೆ–ಅಂಬೇಡ್ಕರರ ಸ್ತ್ರೀವಾದಿ ಜ್ಞಾನದ ಪ್ರಾಯೋಗಿಕತೆ (Education as Trutiya Ratna: Towards Phule-Ambedkarite Feminist Pedagogical Practice), ಇಪಿಡಬ್ಲ್ಯೂ ವಿಕ್ಲಿ, ಸಂಪುಟ ೪೫, ಸಂಚಿಕೆ ೪೪, ೩೦ ಅಕ್ಟೋಬರ್ ೨೦೧೦, ಈ ಲೇಖನ ಮರು ಮುದ್ರಣ ಉಮಾ ಚಕ್ರವರ್ತಿಯವರ ಸಂಪಾದಿತ ಥಿಂಕಿಂಗ್ ಜಂಡರ್, ಡುಯಿಂಗ್ ಜಂಡರ್: ಫೆಮಿನಿಸ್ಟ ಸ್ಕಾಲರ್‌ಶಿಪ್ ಆ್ಯಂಡ್ ಪ್ರಾಕ್ಟಿಸ್ ಟುಡೇ ಪುಸ್ತಕದಲ್ಲಿ ಪ್ರಕಟವಾಗಿದೆ.

೨೩. ಜನಪ್ರಿಯ ಸಂಸ್ಕೃತಿ ಚಿಂತನಾ ಕ್ರಮ ಕಟ್ಟುವಿಕೆ (Conceptualising Popular Culture) ಇಪಿಡಬ್ಲ್ಯೂ, ಮಾರ್ಚ್ ೧೬, ೨೦೦೨.

೨೪. ದಲಿತ ಮಹಿಳಾ ಭಿನ್ನ ದನಿ– ಭಿನ್ನತೆಯ ವಿಮರ್ಶೆ ಮತ್ತು ದಲಿತ ಮಹಿಳಾ ನಿಲುವಿನ ಸ್ಥಿತಿಗತಿ ಕಡೆಗೆ (Dalit Women Talk Differently-A Critique of Difference and Towards a Dalit Feminist Standpoint Position), ಇಪಿಡಬ್ಲ್ಯೂ, ಅಕ್ಟೋಬರ್ ೩೧, ೧೯೯೮

೨೫. ಮಣ್ಣಿನ ಮನೆಯ ಸಾಂಸ್ಕೃತಿಕ ಚಳವಳಿಕಾರರು ಮತ್ತು ಸಾಂಸ್ಕೃತಿಕ ಶ್ರೇಣೀಕರಣ (Of Mudhouse Cultural Activists and Cultural Hierarchies), ಇಪಿಡಬ್ಲ್ಯೂ, ೧೪ ಫೆಬ್ರುವರಿ ೧೯೯೮.

೨೬. Interrogating the Thesis of 'Irrational Deification, ಇಪಿಡಬ್ಲ್ಯೂ, ೧೬ ಫೆಬ್ರುವರಿ ೨೦೦೮.

೨೭. ಸಮಾಜಶಾಸ್ತ್ರ ಮತ್ತು ಲಿಂಗ ವ್ಯವಸ್ಥೆ ಅಧ್ಯಯನದ ಸವಾಲು – ಇಂದು ಮಂಗಳವಾರವಾಗಿದ್ದಲ್ಲಿ. ಸಾಮಾಜಿಕ ಪಾತ್ರವಿದ್ದಿರಬೇಕು (If this is Tuesday… it must be Social Roles-Sociology and Challenge of Gender Studies), ಇಪಿಡಬ್ಲ್ಯೂ ೭ ಮೇ ೧೯೯೪.

೨೮. ಮಾರ್ಕ್ಸ್‌ವಾದದ ಹೆಸರಿನಲ್ಲಿರುವ ಅಂಜಿಕೆ (Homophobia in the Name of Marxism), ಇಪಿಡಬ್ಲ್ಯೂ, ೧ ಜೂನ್ ೧೯೯೬.

೨೯. ಸಮಾಜಶಾಸ್ತ್ರ ಮತ್ತು ಲಿಂಗ ವ್ಯವಸ್ಥೆ ಅಧ್ಯಯನ ನಡುವಿನ ಸಾಂಸ್ಥಿಕ ಮೈತ್ರಿ – ಮೊಸಳೆ ಮತ್ತು ಮಂಗದ ಕಥೆ Institutional Alliance between Sociology and Gender Studies-Story of the Crocodile and Monkey), ಇಪಿಡಬ್ಲ್ಯೂ ಅಗಸ್ಟ್ ೯, ೧೯೯೭.

ಈ ಲೇಖನಗಳಲ್ಲಿ ಕಾಂಟ್ರಿಬ್ಯೂಷನ್ಸ್ ಟು ಇಂಡಿಯನ್ ಸೋಷಿಯಾಲಜಿ (ಸಂಚಿಕೆ.೨೯, ಇಶ್ಯು ೧–೨, ೧೯೯೫) ಪತ್ರಿಕೆಯಲ್ಲಿ ಪ್ರಕಟವಾದ ಲಾವಣಿ ಹಾಗೂ ತಮಾಶಾ (ಮಹಾರಾಷ್ಟ್ರದ ಜಾನಪದ ನೃತ್ಯ ಕಲಾ ಪ್ರಕಾರ) ಲೇಖನ ಅತ್ಯಂತ ಜನಪ್ರಿಯವಾಗಿದ್ದು ಈ ಲೇಖನದಲ್ಲಿ ಸಾಂಸ್ಕೃತಿಕ ಅಭಿವ್ಯಕ್ತಿಗಳು, ಜಾನಪದ ರೂಪಗಳು ಮಹಿಳಾ ಕಲಾಕಾರರನ್ನು ಯಾವ ರೀತಿ ಲೈಂಗಿಕ ಚೌಕಟ್ಟಿನಲ್ಲಿ ಪರಿಭಾವಿಸುತ್ತವೆಂದು ವಿಶ್ಲೇಷಣೆಗೊಳಪಡಿಸಿದೆ. ಸಂಸ್ಕೃತಿಯ ಜನಪ್ರಿಯ ರೂಪಗಳು ಉಪೇಕ್ಷಿತರನ್ನು ಗುರುತಿಸಿದೆ. ವಿವೇಕ ಶುದ್ಧತೆ ಹೊರಹೊಮ್ಮಲು ಸಹಾಯಕವಾಗುವ ಸಾಧ್ಯತೆ ನಿರೂಪಿಸಿದ ರೇಗೆ ಇದನ್ನು 'ಕೌಂಟರ್ ಪಾಲಿಟಿಕ್ಸ್' ಎಂದು ಕರೆದರು. ರೇಗೆಯವರ ಈ ಕೆಲಸದಿಂದ ವಿಭಾಗಗಳ ನಡುವಿನ ಸೀಮೆಗಳು ತಮ್ಮ ಅರ್ಥ ಹಾಗೂ ಉದ್ದೇಶ ಕಳೆದುಕೊಳ್ಳಲಾರಂಭಿಸಿದವು. ಸಂಶೋಧನೆ ಮತ್ತು ಜ್ಞಾನದ ಹುಡುಕಾಟದಲ್ಲಿ ಔಪಚಾರಿಕ ಚೌಕಟ್ಟನ್ನಿಟ್ಟುಕೊಳ್ಳುವುದು ಸೀಮಿತಕ್ಕೊಳಪಡುವ ಕ್ರಮವಾಗಿದ್ದರೆ, ಆ ಚೌಕಟ್ಟಿನಾಚೆಗಿನ ಹುಡುಕಾಟ ತನ್ನ ಮಿತಿಯನ್ನು ಮೀರುವ ಕ್ರಮವಾಗಿರುತ್ತದೆಂದು ತೋರಿಸಿಕೊಟ್ಟಿತ್ತು. ಅವರು ಸಂಶೋಧನೆಯ ಮೂಲಕ ಹೊಸ ಕ್ಷೇತ್ರಗಳನ್ನು ಅನ್ವೇಷಿಸುತ್ತಿದ್ದರು. ಜನಪ್ರಿಯ ಸಂಸ್ಕೃತಿಯೊಂದರಿಂದ ಸಮಾಜಶಾಸ್ತ್ರ ಹಾಗೂ ಲಿಂಗ ಅಧ್ಯಯನಗಳಿಗೆ ಅವಕಾಶ

ಕಲ್ಪಿಸುತ್ತಿದ್ದರೆಂಬುದು ಸ್ಪಷ್ಟವಾಗತೊಡಗಿತ್ತು. ಜನಪ್ರಿಯ ಸಂಸ್ಕೃತಿ ಕುರಿತ ರೇಗೆ ಕೆಲಸ ಸಂಸ್ಕೃತಿ ರಾಜಕಾರಣದ ತಿಳುವಳಿಕೆಯನ್ನು ಒಡೆದು ಹೊಸ ಚಿಂತನೆಯನ್ನು ಕಟ್ಟಿಕೊಡುತ್ತದೆ. ಸಂಸ್ಕೃತಿ ಹೋರಾಟದ ಜಿಜ್ಞಾಸೆಯಲ್ಲಿ ಜಾತಿ ಮತ್ತು ಶ್ರಮ ಸಂಸ್ಕೃತಿ ಯಾವ ನೆಲೆಯಲ್ಲಿದೆ? ಸಂಸ್ಕೃತಿಯ ಅರ್ಥದ ಹೋರಾಟಕ್ಕೂ ಜೀವನೋಪಾಯಕ್ಕಾಗಿ ನಡೆವ ಸಂಸ್ಕೃತಿಯ ಹೋರಾಟಕ್ಕೂ ಇರುವ ಒಳಸಂಬಂಧ ಯಾವುದು? ಯಾವ ನಿರ್ದಿಷ್ಟ ದಾರಿಗಳು ಶ್ರಮ ಸಂಸ್ಕೃತಿಯನ್ನು ಜಂಡರ್‌ನ್ನಾಗಿ ಮಾಡಿದೆ ಎಂದು ಚರ್ಚಿಸಿ ಜನಪ್ರಿಯ ಸಂಸ್ಕೃತಿಯ ಬಗೆಗೆ ಇದ್ದ ಮೊದಲಿನ ಚಿಂತನೆಗಳನ್ನು ಮರುನಿರ್ಮಿಸಿದ್ದಾರೆ.

ಶರ್ಮಿಳಾ ರೇಗೆ ೧೯೯೮ರ ನವೆಂಬರ್‌ನಲ್ಲಿ ದಲಿತರ ಧ್ವನಿ, ದೂರದೃಷ್ಟಿ ಮತ್ತು ರಾಜಕೀಯ ಸಮರ್ಥನೆ ಎಂಬ ವಿಚಾರ ಸಂಕಿರಣದಲ್ಲಿ ಮಂಡಿಸಿದ ದಲಿತ ಸ್ತ್ರೀವಾದಿ ನಿಲುವು ಎಂಬ ಪ್ರಬಂಧ ೪೭೧ನೆಯ ದಲಿತ ವಿಚಾರ ಸಂಕಿರಣ ಸಂಚಿಕೆಯಲ್ಲಿ ಪ್ರಕಟವಾಗಿದೆ. ಒಬ್ಬರ ವಿಮೋಚನೆ 'ಅವರ ವೈಯಕ್ತಿಕ ಅನುಭವ, ಸಮಾಜ ರಚಿತ ಗುಂಪುಗಳ ಅನುಭವಗಳಿಂದ ಕೇಂದ್ರಿಕೃತಗೊಂಡಿರುತ್ತವೆ'. ಶ್ರೇಣೀಕೃತ ಅಧಿಕಾರ ಸಂಬಂಧ ಅಂತಹ ಗುಂಪುಗಳನ್ನು ರಚಿಸುತ್ತದೆ ಎಂದು ಹೇಳಿ 'ದಲಿತ ಮಹಿಳೆ'ಯ ಸಂಕೀರ್ಣತೆ ಬಿಚ್ಚಿಡುತ್ತಾರೆ. ಜಂಡರ್, ವರ್ಣ, ವರ್ಗ, ಜಾತಿ ಮತ್ತು ಲೈಂಗಿಕತೆ ಹೇಗೆ ಒಂದಕ್ಕೊಂದು ರಚಿತವಾಗಿವೆಯೋ ಹಾಗೆಯೇ ದಲಿತ ಮಹಿಳೆ ಮತ್ತು ದಲಿತ ಸ್ತ್ರೀವಾದವನ್ನೂ ಕಟ್ಟಲಾಗಿದೆಯೆಂದು ಅರ್ಥೈಸುತ್ತಾರೆ. ಫುಲೆ–ಅಂಬೇಡ್ಕರ್‌ರ ಜಾತಿ ವಿರೋಧಿ ಸಮುಚ್ಚಯ ಸಮಾಜ ವಿರೋಧದಿಂದ ಕೂಡಿದೆ ಹಾಗೂ ಇತಿಹಾಸದ ಜ್ಞಾನಶಿಸ್ತಿಗೆ ಸ್ಥಳಾಂತರಗೊಂಡಿದೆ ಎಂದು ಹೇಳಿದ್ದಾರೆ. ದಲಿತ ಸ್ತ್ರೀವಾದಿ ದೃಷ್ಟಿಕೋನದ ಮೇಲೆ ಅದರ ಪರಿಣಾಮ ಕಾಣಬಹುದು. ದಲಿತ ಮಹಿಳೆಯ ಕಾರ್ಯ ಮತ್ತು ಹೋರಾಟದ ಬಗ್ಗೆ ಬೌದ್ಧಿಕ ದಲಿತ ಸ್ತ್ರೀವಾದ ಕಾರ್ಯನಿರ್ವಹಿಸಿದೆ. ಇತರ ಗುಂಪಿನ ಮಹಿಳೆಯರ ಅನುಭವ ಮತ್ತು ವಿಚಾರಗಳು ಚಾರಿತ್ರಿಕ ನೆಲೆಯಲ್ಲಿದ್ದು ತಮ್ಮನ್ನು ತಾವು ಶಿಕ್ಷಿಸಿಕೊಳ್ಳುತ್ತವೆ. ಜೊತೆಗೆ ಸಾಮಾಜಿಕ ಸಂಬಂಧಗಳ ಪ್ರಾಮುಖ್ಯತೆಯಲ್ಲಿ ಕಲ್ಪಿತ ಹಾಗೂ ಅಂಚಿನ ಸಮುದಾಯಗಳ ಹೋರಾಟ ಕುರಿತು ರೇಗೆ ಚರ್ಚಿಸುತ್ತಾರೆ. ಸಮಾಜದ ರಚನಾತ್ಮಕ ವ್ಯತ್ಯಾಸದಲ್ಲಿ ಜಾತಿ ಮಧ್ಯವರ್ತಿಯಾಗಿದ್ದು ಜೀವನೋಪಾಯ ನಿರ್ವಹಣೆಯ ಸಂಗತಿಗಳನ್ನು ದಲಿತ ಸ್ತ್ರೀವಾದ ದೃಷ್ಟಿಕೋನದ ನೆಲೆಯಲ್ಲಿ ನಿಂತು ನೋಡಿದ್ದಾರೆ ಮತ್ತು ಅದನ್ನು ಲೋಕಾಯತದವರೆಗೂ ವಿಸ್ತರಿಸಿದ್ದಾರೆ.

**ಶರ್ಮಿಳಾ ರೇಗೆ ಕೃತಿಗಳು**

೧. ಪ್ರೇಮಾಚಾ 'ಅಧಿಕಾರ' ಆಣಿ ಹಿಂಸಚಾ ಪ್ರಶ್ನ (ಮರಾಠಿ), ಸತ್ಯಶೋಧಕ ವಿದ್ಯಾರ್ಥಿ ಸಂಘಟನೆ ಪ್ರಕಾಶನ, ಪುಣೆ, ೧೯೯೯.
೨. ಲಿಂಗ ವ್ಯವಸ್ಥೆ ಸಮಾಜಶಾಸ್ತ್ರ: ಸ್ತ್ರೀವಾದಿ ಸಮಾಜಶಾಸ್ತ್ರ ಸಿದ್ಧಾಂತದ ಸವಾಲು (ಸಂ) (Sociology of Gender: The Challenge of Feminist Sociological Thought) ಸೇಜ್ ಇಂಡಿಯಾ, ನವದೆಹಲಿ, ೨೦೦೪.
೩. ಜಾತಿ ಬರವಣಿಗೆ / ಲಿಂಗ ವ್ಯವಸ್ಥೆ ಬರವಣಿಗೆ: ದಲಿತ ಮಹಿಳೆಯರ ವ್ಯಾಖ್ಯಾನ ನಿರೂಪಣೆ (Writing Caste / Writing Gender: Narrating Dalit Women's Testimonios) ಝುಬಾನ ಪಬ್ಲಿಕೇಶನ್, ನವದೆಹಲಿ, ೨೦೦೬.
೪. ಕಾಲ್ಯಾ ಸ್ತ್ರೀಯಾಂಚಾ ವಿಚಾರ ಅ ಲಟಾ (ಮರಾಠಿ) ಪ್ರತಿಮಾ ಪರದೇಶಿ(ಸಂ), ದಿಂಗಾಗ ಪ್ರಕಾಶನ, ಪುಣೆ, ೨೦೧೩
೫. ಮನುವಿನ ಹುಚ್ಚುತನದ ವಿರುದ್ಧ : ಬ್ರಾಹ್ಮಣ ಪಿತೃಪ್ರಧಾನತೆ ಕುರಿತ ಬಿ. ಆರ್. ಅಂಬೇಡ್ಕರ್ ಬರಹ (Against the Madness of Manu: B.R. Ambedkar's Writings on Brahmanical Patriarchy) ನವಯಾನ ಪಬ್ಲಿಷರ್ಸ್, ದೆಹಲಿ, 2013.

೧. ಲಿಂಗ ವ್ಯವಸ್ಥೆ ಸಮಾಜಶಾಸ್ತ್ರ : ಸ್ತ್ರೀವಾದಿ ಸಮಾಜಶಾಸ್ತ್ರ ಸಿದ್ಧಾಂತದ ಸವಾಲು (ಸಂ) (Sociology of Gender :The Challenge of Feminist Sociological Thought) ಸೇಜ್ ಇಂಡಿಯಾ, ನವದೆಹಲಿ, ೨೦೦೪. : ಈ ಪುಸ್ತಕದಲ್ಲಿರುವ ಎರಡು ಭಾಗಗಳು ಹದಿನಾಲ್ಕು ಲೇಖನಗಳನ್ನು ಒಳಗೊಂಡಿವೆ. ಮೊದಲ ಭಾಗದಲ್ಲಿ ಸ್ತ್ರೀವಾದ, ಮಾನವಶಾಸ್ತ್ರ, ಸಮಾಜಶಾಸ್ತ್ರ ಮತ್ತು ಸ್ತ್ರೀವಾದ ಸಿದ್ಧಾಂತ ಕುರಿತ ಪರಿಕಲ್ಪನಾತ್ಮಕ ಚರ್ಚೆಗಳನ್ನು ಪ್ರಸ್ತುತ ಪಡಿಸಲಾಗಿದೆ. ಎರಡನೆಯ ಭಾಗವನ್ನು ನಾಲ್ಕು ಉಪ ಶೀರ್ಷಿಕೆಯಡಿ ವಿಭಾಗಿಸಲಾಗಿದೆ. ಅವು ಕೆಲಸ, ಕುಟುಂಬ, ಬಂಧುತ್ವ, ಜಾತಿ, ಶಿಕ್ಷಣ ಮತ್ತು ರಾಜ್ಯಗಳ ಕುರಿತ ಲೇಖನಗಳಾಗಿವೆ. ಅದರಲ್ಲಿ ಮಾತೃವಂಶೀಯ, ವಲಸೆ ಮತ್ತು ಮಹಿಳೆಯ ಆರ್ಥಿಕ ಸ್ಥಾನಮಾನ ಕುರಿತ ಚರ್ಚೆಯನ್ನು ಸಂಕಲಿಸಿದೆ. ಕೃಷಿ ಕೆಲಸ ಮತ್ತು ಅರೆನಗರ (ಸಬ್‌ಅರ್ಬನ್) ಉತ್ಪಾದನೆಯ ಕೆಲಸಗಳಲ್ಲಿ ಮಹಿಳೆಯ ಭಾಗವಹಿಸುವಿಕೆ, ಹೆಣ್ಣು ಮಕ್ಕಳ ಶಿಕ್ಷಣ ಮತ್ತು ಶಾಲೆಯಲ್ಲಿ ಸಾಮಾಜಿಕ ಅಸಮಾನತೆ ವಿಷಯಗಳಿವೆ. ರಾಷ್ಟ್ರಾದ್ಯಂತ ಲಿಂಗ ವ್ಯವಸ್ಥೆ ಮತ್ತು ಜಾತಿ ತಾರತಮ್ಯಗಳ ಅನಾವರಣವಿದೆ. ಸಮಾಜಶಾಸ್ತ್ರ ಮತ್ತು ಸ್ತ್ರೀವಾದದ ಅಧ್ಯಯನಗಳನ್ನು ಒಟ್ಟುಗೂಡಿಸಿದೆ. ಭಾರತದಲ್ಲಿ ಸ್ತ್ರೀವಾದ ಸಮಾಜಶಾಸ್ತ್ರದ ಬೌದ್ಧಿಕ ಜ್ಞಾನವಲಯ ಮೇಲೆ ಯಾವ ತೆರನಾಗಿ ಪರಿಣಾಮ ಬೀರುತ್ತದೆ ಎಂಬುದನ್ನು ನಿರೂಪಿಸುತ್ತದೆ. ಇದು ಮಹಿಳಾ ಅಧ್ಯಯನ ಮತ್ತು ಸಮಾಜಶಾಸ್ತ್ರದ ಕೋರ್ಸ್‌ಗಳ ಕೊಡುಕೊಳ್ಳುವಿಕೆಯನ್ನು ಪ್ರಸ್ತುತಪಡಿಸಿದೆ.

ಸಮಾಜಶಾಸ್ತ್ರ ಕುರಿತ ಸ್ತ್ರೀವಾದಿ ವಿಮರ್ಶೆ ಇತ್ತೀಚಿನ ವರ್ಷಗಳಲ್ಲಿ ಹೊಸ ಪ್ರಶ್ನೆಗಳನ್ನು ಎತ್ತುತ್ತಿದೆ. ಈ ಮೂಲಕ ಸಾಮಾಜಿಕ ಜ್ಞಾನವನ್ನು ವಿಸ್ತರಿಸುತ್ತಿದೆ. ಇದೇ ಸಮಯದಲ್ಲಿ ಸ್ತ್ರೀವಾದಿ ಸಂಶೋಧಕರು ಸ್ತ್ರೀವಾದದ ಜ್ಞಾನಶಾಖೆಗೆ ಸ್ತ್ರೀವಾದದ ಎಲ್ಲೆ ವಿಸ್ತರಿಸುವ ಕೊಡುಗೆ ನೀಡುತ್ತಿದ್ದಾರೆ. ಇದು ಭಾರತದಲ್ಲಿ ಸಮಾಜಶಾಸ್ತ್ರವನ್ನು ಎನ್‌ಜಂಡರ್‌ಗೊಳಿಸುತ್ತಿದೆ; ವಿಶಾಲವಾಗಿ ಸಾಮಾಜಿಕ ಸಂಸ್ಥೆಗಳಾದ ಕುಟುಂಬ, ಶಾಲೆ ಮತ್ತು ಕೆಲಸದ ಸ್ಥಳಗಳಲ್ಲಿನ ಮಹಿಳಾ ವಿಷಯಗಳನ್ನು ಒಳಗೊಳ್ಳುತ್ತದೆ.

೩. ಜಾತಿ ಬರವಣಿಗೆ / ಲಿಂಗ ವ್ಯವಸ್ಥೆ ಬರವಣಿಗೆ : ದಲಿತ ಮಹಿಳೆಯರ ವ್ಯಾಖ್ಯಾನ ನಿರೂಪಣೆ (Writing Caste / Writing Gender: Narrating Dalit Women's Testimonios) ಝುಬಾನ ಪಬ್ಲಿಕೇಶನ್, ನವದೆಹಲಿ, ೨೦೦೬.

ಕಳೆದ ದಶಕದಿಂದ ದಲಿತ ಬಹುಜನ ಮಹಿಳಾ ಸಂಘಟನೆ ಸ್ಥಳೀಯ ಮತ್ತು ರಾಷ್ಟ್ರ ಮಟ್ಟದಲ್ಲಿ ಪ್ರತ್ಯೇಕಗೊಳ್ಳುತ್ತಿದೆ. ರಾಜಕೀಯ ಮತ್ತು ಸಾಂಸ್ಕೃತಿಕ ವಲಯಗಳನ್ನು ಇದು ಹೊರಗಿರಿಸುತ್ತದೆ. ದಲಿತ ಮತ್ತು ಸ್ತ್ರೀವಾದಿ ರಾಜಕಾರಣವನ್ನು ದಲಿತ ಮಹಿಳಾ ಚಳವಳಿಯ ವ್ಯಾಪ್ತಿಗೆ ವರ್ಗಾಯಿಸುತ್ತಿದೆ. ವಿಶ್ವವಿದ್ಯಾಲಯ, ಅಧಿಕಾರಶಾಹಿ, ಮಹಿಳಾ ಚಳವಳಿ ಮತ್ತು ಮಹಿಳಾ ಅಧ್ಯಯನದಲ್ಲಿ ನಡೆಯುತ್ತಿರುವ ಜಾತಿ ಉತ್ಪಾದನೆಯ ವಿರುದ್ಧ ಹೋರಾಡುತ್ತಿದೆ. ಜಾತಿ ಅಸ್ತಿತ್ವವನ್ನು ವೈಯಕ್ತಿಕ ಮತ್ತು ಸಾರ್ವಜನಿಕ ನೆಲೆಯಲ್ಲಿ ಪ್ರಶ್ನಿಸಲಾಗುತ್ತದೆ. ಸಮಕಾಲೀನ ಭಾರತದ ಜಾತಿ ಮತ್ತು ಲಿಂಗ ವ್ಯವಸ್ಥೆ ಪ್ರಶ್ನೆಗಳನ್ನು ಅರ್ಥಮಾಡಿಕೊಳ್ಳಲು ಗಂಭೀರ ಸವಾಲುಗಳನ್ನು ಎತ್ತುತ್ತದೆ.

ಇತಿಹಾಸದಲ್ಲಿ ಭಾಗಿಯಾದವರು ಇತಿಹಾಸವನ್ನು ಇತರರಿಗಿಂತ

ಉತ್ತಮವಾಗಿ ಬರೆಯಬಲ್ಲರು. ಜಾತಿಯ ಜೀವಂತ ಅನುಭವಗಳನ್ನು ವಿಶ್ವವಿದ್ಯಾಲಯದ ಕೋರ್ಸ್‌ಗಳು ಒಳಗೊಂಡಿಲ್ಲ. ಈ ಕೊರತೆಯನ್ನು ತುಂಬುವುದು ಈ ಯೋಜನೆಯ ಕಾರ್ಯವಾಗಿದೆ ಎಂದು ರೇಗೆ ಪುಸ್ತಕದ ಮುನ್ನುಡಿಯಲ್ಲಿ ತಿಳಿಸುತ್ತಾರೆ.

ಈ ಪುಸ್ತಕ ಎರಡು ಭಾಗಗಗಳನ್ನು ಒಳಗೊಂಡಿದೆ. ಮೊದಲ ಭಾಗದಲ್ಲಿ ಐತಿಹಾಸಿಕ ಹಿನ್ನೆಲೆಯಲ್ಲಿ ದಲಿತ ಮಹಿಳೆಯರ ಸಂಕಥನಗಳ ವಿನ್ಯಾಸವನ್ನು ವಿವರಿಸುತ್ತದೆ. ಆರಂಭದ ಎಂಟು ಸಂಕಥನಗಳು ಓದುಗರನ್ನು ಭಾವನಾತ್ಮಕ ನೆಲೆಗೆ ದೂಡುತ್ತವೆ. ಈ ಎಂಟು ಜನ ಮಹಿಳೆಯರು ಗುರಿಯನ್ನು ಹೇಗೆ ಸಾಧಿಸಿದರು ಎಂಬುದನ್ನು ಮುಂದಿನ ಭಾಗದಲ್ಲಿ ವಿವರಿಸಿದೆ. ೧೯೭೦ರಿಂದ ಇಲ್ಲಿಯವರೆಗಿನ ನಿರೂಪಣೆಯಲ್ಲಿ ವಿವಿಧ ಕಾಲಘಟ್ಟಗಳ ದಲಿತ ಸ್ತ್ರೀವಾದಿ ಚಳವಳಿ, ಜಾತಿ ಯುದ್ಧ ಮತ್ತು ಇತರ ಸಾಮಾಜಿಕ–ಆರ್ಥಿಕ ವಿಷಯಗಳಿವೆ. ಉದಾಹರಣೆಗೆ, ಬೇಬಿತಾಯಿ ಕಾಂಬಳೆ ಮತ್ತು ಶಾಂತಾಬಾಯಿ ಕಾಂಬಳೆ ಅವರ ಕಥೆಗಳು ಅಂಬೇಡ್ಕರ ಪೂರ್ವದ ಮಹರ ಸಮುದಾಯದ ಜೀವನ ಮತ್ತು ಅಂಬೇಡ್ಕರ್ ಚಳವಳಿಯ ಅಗತ್ಯವನ್ನು ಹೇಳುತ್ತವೆ, ಇದೇ ಸಮಯದಲ್ಲಿ ಶಾಂತಾಬಾಯಿ ದಾನಿ ಮತ್ತು ಕುಮುದ ಪಾವಡೆ ಅವರ ಲಿಂಗ ವ್ಯವಸ್ಥೆ ವಿಷಯಗಳ ಕುರಿತು ಮಾತನಾಡುತ್ತಾರೆ. ಶರ್ಮಿಳಾ ಬುಡಕಟ್ಟು ಸಮುದಾಯದ ಇಬ್ಬರು ಮಹಿಳೆಯರನ್ನು ಆಯ್ದುಕೊಂಡು ಪುರುಷ ಪ್ರಧಾನತೆ ಮತ್ತು ನಿರ್ವಸತಿ ಜನರ ಕುರಿತು ಮಾತನಾಡಿದ್ದಾರೆ. ದಲಿತ ಚಳವಳಿಯಲ್ಲಿ ದಲಿತ ಮಹಿಳೆಯ ಹೋರಾಟ ಗುರುತಿಸಿರುವುದು ಕಂಡು ಬರುತ್ತದೆ.

೪. **ಮನುವಿನ ಹುಚ್ಚುತನದ ವಿರುದ್ಧ: ಬ್ರಾಹ್ಮಣ ಪಿತೃಪ್ರಧಾನತೆ ಕುರಿತ ಬಿ. ಆರ್. ಅಂಬೇಡ್ಕರ್ ಬರಹ** (Against the Madness of Manu: B.R. Ambedkar's Writings on Brahmanical Patriarchy) ನವಯಾನ ಪಬ್ಲಿಷರ್ಸ್, ದೆಹಲಿ, 2013.

ಈ ಕೃತಿ ಮೂರು ಭಾಗಗಳಿಂದ ರಚಿತಗೊಂಡಿದೆ. ಮೊದಲ ಭಾಗ ಅಂಬೇಡ್ಕರ್ ಕೊಲಂಬಿಯಾ ವಿಶ್ವವಿದ್ಯಾಲಯದ ವಿದ್ಯಾರ್ಥಿಯಾಗಿ ಮಂಡಿಸಿದ ಲೇಖನಗಳನ್ನು ಒಳಗೊಂಡಿದ್ದು, ಜಾತಿ ಮತ್ತು ಲಿಂಗ ವ್ಯವಸ್ಥೆ ಸಂಬಂಧವನ್ನು ಜೋಡಿಸುತ್ತದೆ. ಅಂಬೇಡ್ಕರರ 'ಜಾತಿ ಹೇಗೆ ಸಗೋತ್ರದಲ್ಲಿಯೇ ವಿವಾಹವಾಗುವುದನ್ನು ಪ್ರೇರೇಪಿಸುತ್ತದೆ' ಎಂಬ ಲೇಖನವನ್ನು ಒಳಗೊಂಡಿದೆ. ಅಂಬೇಡ್ಕರರ ಮಹಿಳಾಪರ ಬರಹಗಳನ್ನು ಭಾರತೀಯ ಸ್ತ್ರೀವಾದಿಗಳು ಮೆಚ್ಚಿ ವಿಮರ್ಶೆಗೆ ಒಳಪಡಿಸಿದ್ದು ಅವನ್ನು ಪ್ರತಿಬದ್ಧತೆ ಇಲ್ಲದಿದ್ದದುಕ್ಕಾಗಿ ಇದ್ದಂತೆಯೇ ನಿರ್ಲಕ್ಷಿಸಬಹುದಾಗಿತ್ತು, ಆದರೆ ತಿರಸ್ಕರಿಸಲೇ ಬೇಕಾದುದನ್ನು ಅತ್ಯಂತ ಮತಿಹೀನತೆಯಿಂದ ಅಧ್ಯಯನ ನಡೆಸಲಾಯಿತೆಂದು ರೇಗೆ ವಾದಿಸುತ್ತಾರೆ. ಅಂಬೇಡ್ಕರ್ ವಿಚಾರಗಳ ಬಗ್ಗೆ ಭಾರತೀಯ ಬೌದ್ಧಿಕವಲಯ ಮತ್ತು ಶೈಕ್ಷಣಿಕವಲಯ ಉಪೇಕ್ಷಾ ಮನೋಭಾವ ತಳೆದಿದ್ದರೆ ಸ್ತ್ರೀವಾದಿಗಳು ಅಂಬೇಡ್ಕರ್ ತರಹ ಖಾಸಗಿಯಾಗಿ ಮತ್ತು ಸಾರ್ವಜನಿಕವಾಗಿ ಸಮುದಾಯಗಳನ್ನು ಒಟ್ಟುಗೂಡಿಸುವ ಸಾಮರ್ಥ್ಯ ಹೊಂದಿಲ್ಲದಿದ್ದರೂ ಆಮೂಲಾಗ್ರ ಪರಿವರ್ತನೆ ಕುರಿತು ಚಿಂತಿಸುತ್ತಾರೆ. ಹಾಗಾಗಿ ಅಂಬೇಡ್ಕರ್ ಬರಹ ಮತ್ತು ಚಿಂತನೆಗಳನ್ನು ಮರಾಠಿಯ ಜನಪ್ರಿಯ ಸಂಸ್ಕೃತಿ, ಸಂಗೀತ, ಥಿಯೇಟರ್ ಮತ್ತು ದೃಶ್ಯಕಲೆ ಒಳಗೊಳ್ಳುವ ದಲಿತ ವಿದ್ವತ್ ಜೊತೆ ತೌಲನಿಕ ಹೋಲಿಕೆ ಮಾಡಿದಾಗ 'ದಲಿತ್ ಕೌಂಟರ್ ಪಬ್ಲಿಕ್ಸ್' ತುಂಬಾ ವ್ಯತ್ಯಾಸ ಹೊಂದಿರುವುದು ಕಂಡುಬರುತ್ತದೆಂದು ಹೇಳಿದ್ದಾರೆ.

ಜಾತಿ ವಿರೋಧಿಗಳು ಜಾತಿ ಕಟ್ಟಳೆಯ ಕ್ರೂರತೆ ಹಾಗೂ ಭ್ರಷ್ಟತೆಯನ್ನು ಚೆನ್ನಾಗಿ ಅರಿತವರಾಗಿದ್ದರು. ಜಾತಿ ಪದ್ಧತಿಯ ಅತ್ಯಂತ ವಿನಾಶಕಾರಿ ಅಂಶಗಳು ಪಿತೃಪ್ರಧಾನವಾಗಿವೆಯೆಂದು ತಿಳಿದಾಗ ಅವರು ತಮ್ಮಷ್ಟಕ್ಕೆ ತಾವೇ ಚಕಿತರಾದರು. ಆ ಸಂದರ್ಭದಲ್ಲಿ ಭಾರತದ ಉಪಖಂಡದುದ್ದಗಲಕ್ಕೂ ರೂಪುಗೊಳ್ಳುತ್ತಿದ್ದ ಬ್ರಾಹ್ಮಣ ವಿರೋಧಿ ಚಳವಳಿಗಳು ಹಾಗೂ ಜಾತಿ ವಿರೋಧಿ ಚಳವಳಿಗಳ ಕೆಲವು ವಿದ್ವಾಂಸರಿಗೆ ಅಂಬೇಡ್ಕರ್ ಅವರ ವಿಚಾರಗಳಲ್ಲಿನ ಅತ್ಯಂತ ತೀಕ್ಷ್ಣ ನೋಟಗಳು ಹೊಸ ರೀತಿಯದಾಗಿ ಕಾಣಿಸಲಾರಂಭಿಸಿದವು. ಅದೇ ರೀತಿ ಶೂದ್ರರು ಹಾಗೂ ಮಹಿಳೆಯರಿಗೆ ಸಂಬಂಧಿಸಿದಂತೆ ರೇಗೆ ಎತ್ತಿದ ಕೆಲವು ಪ್ರಶ್ನೆಗಳು ಹೊಸ ಚಿಂತನೆಗಳಾಗಿದ್ದವು. ಅವರು 'ಮನುವಿನ ಹುಚ್ಚುತನ'ದಲ್ಲಿ ಅಡಗಿರುವ ತಾರ್ಕಿಕತೆಯನ್ನು ಗುರುತಿಸಿದ್ದಲ್ಲದೆ, ಸಾಮಾಜಿಕ ಭಿನ್ನತೆ ಮತ್ತು ಶ್ರೇಣೀಕರಣ ಸ್ಥಾಪಿಸುವಲ್ಲಿ ಮನು ಹೊಂದಿದ್ದ ಗೀಳು; ಶೂದ್ರ ಹಾಗೂ ಚಾಂಡಾಲರ ಬಗೆಗಿನ ಆತನ ಪೂರ್ವಗ್ರಹ ಪೀಡಿತ ಧೋರಣೆ ಮತ್ತು ಅವನಿಗಿದ್ದ ಸ್ಪಷ್ಟವಾದ ಸ್ತ್ರೀ ದ್ವೇಷ –ಇವು ಹಿಂದೂ ಸಮಾಜ ಪದ್ಧತಿಯ ನಿರ್ಣಾಯಕ ಮತ್ತು ಅತ್ಯುಚ್ಛ ಮಗ್ಗಲುಗಳೆಂದು ನಿರೂಪಿಸಿದರು.

**ಒಡನಾಟದ ಮದುವೆ**

ಅಂಬೇಡ್ಕರ್ ಹಾಗೂ ಅವರ ಮೊದಲ ಪತ್ನಿ ರಮಾಬಾಯಿ ಮದುವೆಯ ಚಿತ್ರ ಈ ಪುಸ್ತಕದ ಮುಖ ಪುಟವಾಗಿದೆ. ಅದನ್ನು ಒಡನಾಟದ ಮದುವೆ ಎಂದು ರೇಗೆ ವ್ಯಾಖ್ಯಾನಿಸಿದ್ದಾರೆ. ಆ ಮೂಲಕ ಅಂಬೇಡ್ಕರರ ವೈವಾಹಿಕ ಜೀವನದ ದಲಿತ ಗ್ರಹಿಕೆಗೆ ರೇಗೆ ಕರೆದೊಯ್ಯುತ್ತಾರೆ. ರೇಗೆ ತನ್ನ ಪುಸ್ತಕ "ರೈಟಿಂಗ್ ಕಾಸ್ಟ್, ರೈಟಿಂಗ್ ಜಂಡರ್; ದಲಿತ್ ವುಮನ್ಸ್ ಟೆಸ್ಟಿಮೋನ್ಸ್"ದಿಂದ ವಾದವೊಂದನ್ನು ಎತ್ತಿಕೊಂಡು ಒಡನಾಟದ ಮಾದರಿ ಮದುವೆಯನ್ನು ಸೂಚಿಸಿದ್ದಾರೆ. ಅದು ಮೇಲ್ಜಾತಿ ಮಹಿಳೆ ಆಧುನಿಕ ಜಗತ್ತು ಪ್ರವೇಶಿಸುವುದನ್ನು ಗುರುತಿಸುತ್ತದೆ. ದಾಂಪತ್ಯವನ್ನು ವಿಕಾಸ ಹೊಂದುತ್ತಿರುವ ಸಮುದಾಯದ ರಾಜಕಾರಣ ಸಂದರ್ಭದೊಳಗೆ ಮರುಸ್ಥಾಪಿಸುತ್ತದೆ. ರಮಾಬಾಯಿ ಯಾವಾಗಲೂ ಅಂಬೇಡ್ಕರ್ ಆಲೋಚನೆಗಳನ್ನು ಒಪ್ಪುತ್ತಿರಲಿಲ್ಲವಾದರೂ ಅಂತಿಮವಾಗಿ ಅರಿತುಕೊಳ್ಳುತ್ತಿದ್ದಳೆಂದು ರೇಗೆ ಅಂಬೇಡ್ಕರ್ ದೃಷ್ಟಿಯ ಆದರ್ಶ ಶಕ್ತಿಯನ್ನು ನಮೂದಿಸಿ ಸಮರ್ಥಿಸುತ್ತಾರೆ. ಅಂಬೇಡ್ಕರ್ ಚಳವಳಿಯಲ್ಲಿ ಅನೇಕ ಮಹಿಳೆಯರು ಭಾಗವಹಿಸಿದ್ದು, ಸಮುದಾಯ ಮತ್ತು ದಾಂಪತ್ಯ ಬಗೆಗೆ ತಿಳಿಯುತ್ತದೆ. ಅಂಬೇಡ್ಕರರು ಜಾತಿ ಮತ್ತು ಜಂಡರ್‌ನ್ನು ಏಕಕಾಲದಲ್ಲಿ ಯಾವ ರೀತಿ ಸಾಧಿಸಿದರು ಎಂಬುದು ತಿಳಿಯದೆ ಹೋಗುತ್ತದೆಂದು ಹೇಳುತ್ತಾರೆ. ಹಿಂದು ಕೋಡ್ ಬಿಲ್ ಪಾಸಾಗದೆ ಇದ್ದುದು, ಅದಕ್ಕಾಗಿ ಅಂಬೇಡ್ಕರ್ ರಾಜೀನಾಮೆ ನೀಡಿದ್ದು ಅಂಬೇಡ್ಕರ್‌ರಲ್ಲಿದ್ದ ಸಮಾನತೆಯ ಆಶಯ ತಿಳಿಸುತ್ತದೆ.

ಜಾತಿ ಹಾಗೂ ಜಂಡರ್ ಸಂಬಂಧಗಳು ಪರಸ್ಪರ ರೂಪುಗೊಂಡಿವೆಯೆಂದೂ ಒಂದರ ಬಗ್ಗೆ ಗಮನಹರಿಸಿ ಇನ್ನೊಂದನ್ನು ಉಪೇಕ್ಷಿಸಿದರೆ ಅದು ಸುಲಭವಾಗಿ ಅರಿವಿಗೆ ನಿಲುಕದೆಂದೂ ಎತ್ತಿ ಹೇಳುತ್ತಾಳೆ. ಕೆಲವರು ತಮ್ಮ ಕೆಲಸ ಸಾಧಿಸಿಕೊಳ್ಳಲು ಜಾತಿಯನ್ನು ಜಂಡರ್‌ಆಗಿ ಪರಿಗಣನೆ ಮಾಡುವ ಅವಕಾಶ ಹೊಂದಿರುವರೆಂದೂ ಇತರರು ಜಂಡರ್ ಬಗ್ಗೆ ಹೇಳುವಾಗಲೂ ಅವರು ಜಾತಿ ಕಡೆಗೆ ಲಕ್ಷ್ಯವೀಯರೆಂದೂ ಜಾತಿಯಲ್ಲಿ ತೊಡಗಿಸಿಕೊಂಡು ಜಂಡರ್‌ಅನ್ನು ದೂರ ಮಾಡುವವರು ಜಾತಿ ಕ್ರಮದಲ್ಲಿನ ವಿಶ್ವಾಸಾರ್ಹ ಅಂಶಗಳನ್ನು ಸಮರ್ಥಿಸಿ ಮುಂದುವರೆಯುವರೆಂದೂ ರೇಗೆ ಮರಾಠಿ ಸಂದರ್ಭಗಳಲ್ಲಿ ಸ್ಥಾಪಿತವಾದ ಬ್ರಾಹ್ಮಣೇತರ ಸ್ತ್ರೀತ್ವ ಪರಿಕಲ್ಪನೆಗಳನ್ನು ಎತ್ತಿ ತೋರಿಸುತ್ತಾರೆ. ರೇಗೆ ಭಾರತೀಯ ಸಂದರ್ಭದಲ್ಲಿ ಸ್ತ್ರೀವಾದಿ ವಿಶ್ಲೇಷಣೆಯಲ್ಲಿ ಜಾತಿಯನ್ನು ಜಂಡರ್‌ದಿಂದ ಸುಲಭವಾಗಿ ಬೇರ್ಪಡಿಸಲು ಸಾಧ್ಯವಿಲ್ಲ ಮತ್ತು ಹಾಗೆ ಮಾಡಲುಬಾರದೆಂದು ಸ್ಪಷ್ಟಗೊಳಿಸುತ್ತಾರೆ.

ಜಾತಿಯ ಎಲ್ಲ ನಿರಾಕರಣೆಗಳು; ಅದನ್ನು ಪ್ರೇರೇಪಿಸಬಲ್ಲ ಸಂಗತಿಗಳು ಅತಿ ಶಕ್ತಿಶಾಲಿಯಾದ ಸಾರ್ವಜನಿಕ ಸಂಸ್ಕೃತಿಯೇ ಆಗಲು ದಾರಿ ಮಾಡಿಕೊಡುತ್ತವೆ. ಈ ಕಾರಣದಿಂದಲೇ ಅವು ಜಾತಿಯೊಡನೆ ಹೋರಾಡಲು ನಿರ್ಣಾಯಕ ಘಟ್ಟದ ಕೊರತೆ ಅನುಭವಿಸುತ್ತವೆ. ಜಾತಿ ಹಾಗೂ ಲಿಂಗ ಸಂಬಂಧಿ ವಿಶ್ಲೇಷಣೆಗಳನ್ನು ಜೊತೆಗಿಡುವುದಕ್ಕಿರುವ ತಡೆಗಳೆಲ್ಲವೂ ಶರ್ಮಿಳಾ ರೇಗೆ ಪ್ರಕಾರ ಮಹತ್ವದವಾಗಿವೆ.

ಶರ್ಮಿಳಾ ರೇಗೆ ಅನೇಕ ಸೂಕ್ಷ್ಮ ಅಂಶಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಅಂಬೇಡ್ಕರ್ ಜಾತಿಶ್ರೇಣಿಯ ವಿಚಾರ, ವಿಶೇಷವಾಗಿ ಜಾತಿ ಸ್ವಗೋತ್ರ ವಿವಾಹ ರೂಢಿ ಸಂಬಂಧ ಇಟ್ಟುಕೊಂಡಿರುವ ಧೋರಣೆಯಾಗಿದೆ ಎಂದು ರೇಗೆ ಒತ್ತಿ ಹೇಳುತ್ತಾರೆ. ಇದು ಜಾತಿ ಆಧಾರಿತ ಸಮಾಜದ ಬಲ ಅಥವಾ ಅಧಿಕಾರದ ಕಾರ್ಯಾಚರಣೆಗೆ ಸಂಬಂಧಿಸಿದೆ. ರೇಗೆ ಅಂಬೇಡ್ಕರ್ ವಾದದ ಪ್ರಧಾನ ಅಂಶದ ಬಗ್ಗೆ ಗಮನ ಸೆಳೆದು ಜಾತಿಗಳು ಯಾವ ರೀತಿಯಲ್ಲಿ ವಿಜಾತೀಯ ವಿವಾಹ ಮಾಡಿಕೊಳ್ಳುವುದನ್ನು ತಡೆಗಟ್ಟುತ್ತವೆ, ಜಂಡರ್ ಅಸಮಾನತೆಯನ್ನು ಉಳಿಸಿಕೊಳ್ಳುವ ಅಥವಾ ಉಳಿಸಿಕೊಳ್ಳದ ವಿಚಾರವೂ ಜಂಡರ್ ಹೆಚ್ಚುವರಿಯನ್ನು ಹೇಗೆ ನಿರ್ವಹಿಸುತ್ತದೆಂದು ಗಮನ ಸೆಳೆಯುತ್ತಾರೆ. ಈ ಸಂದರ್ಭದಲ್ಲಿ ರೇಗೆ ಅಂಬೇಡ್ಕರ್‌ರ "ಹಿಂದು ಮಹಿಳೆಯ ಪತನ"ದ ತಿಳುವಳಿಕೆಯನ್ನು ಎತ್ತಿ ತೋರಿಸುತ್ತಾರೆ. ಬ್ರಾಹ್ಮಣತ್ವದ ಮೇಲೆ ಬೌದ್ಧ ಧರ್ಮದ ವಿಜಯದೊಂದಿಗೆ; ಶೂದ್ರರ ಗುಲಾಮಗಿರಿ, ಮಹಿಳೆಯರ ಪತನಕ್ಕೆ ಕಾರಣವಾದ ಲೈಂಗಿಕ ಹಾಗೂ ವೈವಾಹಿಕ ಆಚರಣೆಗಳು ಮತ್ತದರ ಬದಲಾವಣೆಗಳನ್ನು ಅಂಬೇಡ್ಕರ್ ಗ್ರಹಿಸಿಕೊಂಡ ಬಗೆ ಹೊಸ ರೀತಿಯಲ್ಲಿ ಎತ್ತಿ ತೋರಿಸಿದ್ದಾರೆ.

## ಸ್ತ್ರೀವಾದಿಗಳಿಗೆ ಉಪಯೋಗಕರ

ಅಂಬೇಡ್ಕರ್ 'ರೀಡಿಂಗ್ ಆಫ್ ಮನ್ಸು ಡಿಕ್ಟ್' ಪ್ರಬಂಧದ ಎರಡನೆಯ ಭಾಗದಲ್ಲಿ ಯಾರು ಯಾರನ್ನು ಮದುವೆಯಾಗಬೇಕು, ಹೇಗೆ ಮದುವೆಯಾಗಬೇಕೆಂಬ ವಿವರಗಳಿವೆ. ಇವೆಲ್ಲವೂ "ಮ್ಯಾಡ್ನೆಸ್ಸ್ ಆಫ್ ಮನು"ವನ್ನು ರೂಪಿಸಿದ್ದು ಈ ವಿಷಯದ ಮೇಲಿನ ಅಂಬೇಡ್ಕರ್‌ರ ವಿಚಾರಗಳು ಸ್ತ್ರೀವಾದಿಗಳಿಗೆ ಉಪಯೋಗಕರವಾಗಲು ಅನೇಕ ಕಾರಣಗಳಿವೆಯೆಂದು ರೇಗೆ ಹೇಳುತ್ತಾರೆ. ಅದು ಸಮಕಾಲೀನ ಸಮಾಜದ ಲಿಂಗ ಅಸಮನತೆ, ಜನಸಂಖ್ಯೆಯಲ್ಲಿ ಏರಿಳಿತ, ಲಿಂಗಾನುಪಾತದಲ್ಲಿ ಇಳಿಮುಖ ವಿಶ್ಲೇಷಿಸಲು ಒಂದು ವೈಚಾರಿಕ ನಮೂನೆಯನ್ನು ಒದಗಿಸುತ್ತದೆ. ಉದಾಹರಣೆಗೆ, ಸತಿ ಪದ್ಧತಿ, ವೈಧವ್ಯ ಮತ್ತು ಬಾಲ್ಯವಿವಾಹಗಳು ಬ್ರಾಹ್ಮಣ ಪುರುಷರ ಪ್ರಾಬಲ್ಯವನ್ನು ಅನಿವಾರ್ಯಗೊಳಿಸುತ್ತದೆ. ಹೆಣ್ಣು ಶಿಶು ಹತ್ಯೆ ಮತ್ತು ಗಂಡು ಮಗುವಿಗೆ ಅಧಿಕ ಪ್ರಾತಿನಿಧ್ಯ ಇವೆಲ್ಲವೂ ಲಿಂಗಾನುಪಾತ ಕಡಿಮೆ ಆಗಲು ಕಾರಣವಾಗುತ್ತದೆ. ಹೆಣ್ಣಿನ ಅಸ್ತಿತ್ವವನ್ನು ಅಪಮಾನಕ್ಕೀಡು ಮಾಡುವುದಲ್ಲದೆ ಅದನ್ನು ಕಾನೂನು ಸಮ್ಮತಗೊಳಿಸುವ ಬಗೆಯೆ ಗುಲಾಮಗಿರಿಯ ಮೂಲವನ್ನು ಪುಷ್ಟೀಕರಿಸುತ್ತದೆ. ಸ್ಮೃತಿಕಾರರು ಜಾತಿಯಲ್ಲಿ ವಂಶ ಬೆಳೆಸುವ ಹಾಗೂ ಮಿಶ್ರ ಸಾಮಾಜಿಕತೆಯನ್ನು ಗುರುತಿಸುವ ಮುಖವಾಡದಲ್ಲಿ ಯಾವ ತೆರನಾಗಿ ಜಾತಿ ಗುರುತನ್ನು ನಿಶ್ಚಿತಗೊಳಿಸಲು ಯತ್ನಿಸಿದ್ದಾರೆಂದು ತಿಳಿದುಬರುತ್ತದೆ. ಪ್ರಸ್ತುತ ಸಂದರ್ಭದಲ್ಲಿ ನಡೆಯುವ ಖಾಪ್ ಹಾಗೂ ಜಾತಿ ಪಂಚಾಯತಿಗಳೆಸಗುವ ಅಪಮಾನ, ನಡೆಸುವ ಅಪರಾಧಗಳಿಗೆ ರಕ್ಷಣೆ ನೀಡಬೇಕಾದ ಸಂಗತಿ ಸೂಚಿಸುತ್ತದೆಂದು ಗುರುತಿಸಿದ್ದಾರೆ.

ವಿವಿಧ ಬಗೆಯ ಮದುವೆಗೆ ಸಂಬಂಧಿಸಿ ಮನು ಜಾರಿಗೊಳಿಸಿದ ಕಾಯಿದೆಗಳನ್ನು ಪ್ರಸ್ತಾಪಿಸಿರುವ ರೇಗೆ ದೇವದಾಸಿಯರ ಸಂಖ್ಯೆಯ ಬಗ್ಗೆ ಚರ್ಚಿಸುತ್ತಾರೆ. ಆಕೆ ಸ್ತ್ರೀವಾದಿಗಳಲ್ಲಿ ಜಾತಿ ಲೈಂಗಿಕ ಕಾರ್ಯಕರ್ತೆಯರನ್ನು ತಿಳಿದುಕೊಳ್ಳುವಲ್ಲಿ ಭಿನ್ನಾಭಿಪ್ರಾಯ ಇರುವುದನ್ನು ಪ್ರಸ್ತುತಪಡಿಸುತ್ತಾರೆ. ಸ್ತ್ರೀವಾದಿಗಳು ದೇವಸ್ಥಾನದಲ್ಲಿದ್ದ ನರ್ತಕಿಯರು ಆಧುನಿಕ ರೂಪ ತಳೆದು ಬಾರ್ ಡ್ಯಾನ್ಸರ್ ಆಗಿರುವುದನ್ನು ನೋಡಬಹುದು. ಈ ದೃಷ್ಟಿಕೋನ ಕೇವಲ ಜಾತಿಯ ಅಧಿಕಾರ ರಚನೆ ಹಾಗೂ ಜನಾದೇಶ ಉಪೇಕ್ಷೆ ಮಾಡುವ ಕ್ರಮ ಆಯ್ಕೆ ಮಾಡಿಕೊಂಡರೆ ಮಾತ್ರ ಸಾಧ್ಯವಾಗುತ್ತದೆ. ಲೈಂಗಿಕ ಕಾರ್ಯಕರ್ತೆಯರೆಲ್ಲರೂ ಅತಿ ಬಡತನದ ಸಮುದಾಯದಿಂದ ಬಂದವರಾಗಿರುವುದಿಲ್ಲ. ಅಂಬೇಡ್ಕರರ ಮುರಲಿ (ಜೋಗವ್ವ, ದೇವದಾಸಿ)ಯರನ್ನು ಜಾತಿಯ ಕಳಂಕ ಹಾಗೂ ಬ್ರಾಹ್ಮಣತ್ವದ ಭ್ರಷ್ಟತೆಯಿಂದ ಗುರುತಿಸಿರುವುದೇ ಕಾರಣವಾಗಿದೆ ಎಂದು ವಾದಿಸಿದ್ದಾರೆ.

ಒಂದು ವೇಳೆ ಮುರಲಿಯರನ್ನು ಉದ್ಧರಿಸಲು ಪ್ರಯತ್ನಿಸಿದ್ದರೆ, ಆ ಪ್ರಯತ್ನ ಮದುವೆಯ ಚೌಕಟ್ಟಿಗೊಳಪಡುವ ಸುಧಾರಣೆಯಲ್ಲವೆಂದೂ ಜನತೆಗೆ ತಮ್ಮ ಜೀವನ ಸಾಗಿಸಲು ಸಾಕಷ್ಟು ಮಾರ್ಗಗಳಿವೆಯೆಂದೂ ವ್ಯಕ್ತಿ ಜಾತಿದೀಕ್ಷೆ ಹೊಂದಿದ ಆಚರಣೆ ಮಾತ್ರ ಏಕೆ ಅನುಕರಿಸುತ್ತಾನೆಂದೂ ಒಬ್ಬ ವ್ಯಕ್ತಿ ತನಗಾಗಿ ಹೊಸದೊಂದು ಅರ್ಥದಲ್ಲಿ ಜೀವನ ಕಟ್ಟಿಕೊಳ್ಳಲು ಪ್ರಯತ್ನಿಸಬಹುದೆಂದೂ ರೇಗೆ ಹಿಂದೂ ಕೋಡ್ ಬಿಲ್ ಚೌಕಟ್ಟಿನಲ್ಲಿ ಪ್ರಾರಂಭವಾದ ಚರ್ಚೆಯ ವಾದವನ್ನು ಉಲ್ಲೇಖಿಸಿದ್ದಾರೆ. ಇದಕ್ಕೆ ಸಂಬಂಧಿಸಿ ಸ್ತ್ರೀವಾದಿಗಳು ಈ ಚರ್ಚೆಯಲ್ಲಿ ಅಂಬೇಡ್ಕರನ್ನು ಸಾಕಷ್ಟು ದೂರವಿಟ್ಟಿರುವುದು ಶೋಚನೀಯವಾಗಿದೆ. ಅವರು ತಮ್ಮ ಚಿಂತನೆಗಳನ್ನು ಪುನಾರಚನೆ ಮಾಡುತ್ತ ಹೊಸ ನೀತಿಯಲ್ಲಿ ಸ್ಪಷ್ಟವಾಗಿ ಸಾಮಾಜಿಕ ಸಂಬಂಧಗಳು ಹಾಗೂ ವ್ಯವಹಾರಗಳಿಗೆ ಚೇತರಿಕೆ ಕೊಡಬಹುದೆಂದು ಹೇಳಿದರು. ಹಿಂದೂ ಕಾಯ್ದೆಯನ್ನು ಸುಧಾರಿಸುವುದರಲ್ಲಿ ಅವರ ಸ್ಪಷ್ಟವಾದ ಆಸಕ್ತಿ ತಮ್ಮ ಮತ್ತು ಇತರರ–ಸಮಾನತೆಯ ಮೂಲಭೂತ ದೃಷ್ಟಿಗೆ ಸಂಬಂಧಿಸಿದ್ದಾಗಿತ್ತು. ಅಂಬೇಡ್ಕರ್ ಪ್ರತಿಪಾದಿಸುವ ನ್ಯಾಯ ಮತ್ತು ನಾಗರಿಕತ್ವಗಳು ಅವರಿಗೆ ಗೆಳೆಯರನ್ನು ಗಳಿಸಿಕೊಡಲಿಲ್ಲ. ಅವರ ಅನೇಕ ಮಿತ್ರರು, ಅವರ ಸುಧಾರಣೆಯ ಕ್ರಮಗಳನ್ನು ಒಪ್ಪುವ ಮಹಿಳೆಯರನ್ನೂ ಸಾಂವಿಧಾನಿಕ ಶಾಸನ ಸಭೆಯಲ್ಲಿ ಸದಸ್ಯರನ್ನಾಗಿ ಮಾಡಿಕೊಂಡರು. ಹಿಂದೂ ಕೋಡ್ ಬಿಲ್ ಇಂದಿಗೂ ತನ್ನ ಎಲ್ಲ ವಿವರಣೆಗಳಲ್ಲಿ ಹಾಗೆಯೆ ಉಳಿದಿದೆ ಎಂದು ಹೇಳಿದ ರೇಗೆ ಅಂಬೇಡ್ಕರ್ ನಮಗೆ ಅತ್ಯಂತ ಮೌಲ್ಯಯುತ ಸಂಕೇತವನ್ನು ಪ್ರತಿಕ್ರಿಯಿಸಲು ಕೊಟ್ಟಿದ್ದಾರೆ ಎಂದು ಭಾವಿಸುತ್ತಾರೆ.

ಅಂಬೇಡ್ಕರ ಚಿಂತನೆಗಳನ್ನು ಸಾಂಪ್ರದಾಯಿಕ ಬ್ರಾಹ್ಮಣ ಸಮಾಜ ನಿರ್ಲಕ್ಷ್ಯ ಮಾಡಿದೆ ಎಂದು ಹೇಳುತ್ತಾರೆ. ಸುಮಾರು ಎರಡು ದಶಕಗಳ ಹಿಂದೆ ರೇಗೆ ವಿವಿಧ ಸಾರ್ವಜನಕ ಕೌಂಟರ್‌ಗಳಲ್ಲಿ ಉತ್ಪತ್ತಿಯಾದ ಬ್ರಾಹ್ಮಣ ಮತ್ತು ಬ್ರಾಹ್ಮಣೇತರ ಹಾಗೂ ದಲಿತ ಸ್ತ್ರೀವಾದಿ ದೃಷ್ಟಿಕೋನವನ್ನು ಸ್ಪಷ್ಟೋಕ್ತಿಗಳಲ್ಲಿ ಜ್ಞಾನದ ಜಗತ್ತು ಕಟ್ಟುವ ಮಹತ್ವದ ಬಗ್ಗೆ ಗಮನಹರಿಸಲು ಹೇಳಿದ್ದರು. ನಾವು ಜ್ಞಾನವನ್ನು ಗಳಿಸುವ ಬಗ್ಗೆ ಚಿಂತನಶೀಲರಾಗಿರಬೇಕು; ಯಾವ ಸಂದರ್ಭಗಳಲ್ಲಿ, ಯಾವ ಸ್ಥಳಗಳಿಂದ ಎಂಥ ವಿವಾದಿತ ಸಾಧನಗಳ ಮೂಲಕ ನಾವು ಸೈದ್ಧಾಂತೀಕರಿಸಿಕೊಳ್ಳುತ್ತೇವೆಯೋ ವಾದಿಸುತ್ತೇವೆಯೋ ಅದನ್ನು ಅಂತರ್ಗತಗೊಳಿಸಿಕೊಳ್ಳುತ್ತ ಕೊನೆಗೊಳಿಸುತ್ತೇವೆಯೋ ಯಾವ ವಿಷಯದ ಮುನ್ನೆಲೆಗಾಗಿ ನಾವು ಹುಡುಕಾಡಲು ಪ್ರಯತ್ನಿಸುತ್ತೇವೆಯೋ ಅದನ್ನು ನಾವು ಲಘುವಾಗಿ ಪರಿಗಣಿಸದೆ ಆಸಕ್ತಿಯಿಂದ ಪರೀಕ್ಷಿಸಬೇಕು ಎಂದು ಆಕೆ ಹೇಳಿ ಎಚ್ಚರಿಸುತ್ತಾರೆ.

ನಾವು ಚಿಂತನಶೀಲರಾಗಬೇಕು ಎಂದರೆ ಸಮನ್ವಯಕಾರಿ ಧ್ವನಿ ಹೊಂದಿರಬೇಕೆಂಬ ಅರ್ಥವಲ್ಲದಿದ್ದರೂ ಕೆಳವರ್ಗಕ್ಕೆ ಸೀಮಿತರಾದವರನ್ನು ಪರಿಚಿತ ಹಾಗೂ ಸ್ಥಾಪಿತ ಸ್ತ್ರೀವಾದಿ

ತಿಳುವಳಿಕೆಯಲ್ಲಿ ಹಿಡಿದಿಡುವ ಪ್ರಯತ್ನ ಮಾಡಬೇಕು. ಅದಕ್ಕಾಗಿ ಶಿಷ್ಟ ಹಾಗೂ ಅತ್ಯುತ್ತಮ ಆದರೆ ಸೀಮಿತ ಧ್ವನಿಯನ್ನು ಗಮನಿಸಬೇಕು ಎಂದೂ ಹೇಳುತ್ತಾರೆ. ಬ್ರಾಹ್ಮಣರಲ್ಲಿ ಪಿತೃಪ್ರಧಾನ ಪದ್ಧತಿ ಇರುವಂತೆ, ದಲಿತರಲ್ಲೂ ಪಿತೃಪ್ರಧಾನ ಪದ್ಧತಿ ಇದೆ ಎಂದು ಜಗಳಾಡಬೇಕಾಗಿಲ್ಲ, ವಾದ ಮಾಡಬೇಕಾಗಿಲ್ಲ. ಈ ಪದ್ಧತಿಯಲ್ಲಿ ಶ್ರೇಣೀಕೃತ ಅಸಮಾನತೆಯ ಪಿತೃಪ್ರಧಾನದ ರಚನೆಗಳು ಹೇಗೆ ತಮ್ಮ ಮೇಲೆ ಪರಿಣಾಮಗಳನ್ನು ಬೀರಬಲ್ಲವು ಎಂದು ಕೇಳಿಕೊಳ್ಳುವುದು ಅತಿ ಮಹತ್ವದ್ದಾಗಿದೆ. ಅದು ಕೇವಲ ವೈಚಾರಿಕ ಸ್ಪಷ್ಟತೆಯಾಗಿರದೆ ವೈಯಕ್ತಿಕ ಸ್ಪಷ್ಟತೆಯೂ ಆಗಿರಬೇಕು. ಅಲ್ಲದೆ ಅಂಥದೊಂದು ಗ್ರಂಥ ಅನೇಕ ವರ್ಷಗಳ ಕ್ಲಾಸ್‌ರೂಮು ವ್ಯವಹಾರಗಳನ್ನು, ದ್ವಿಭಾಷಾ ಜಗತ್ತು ಹಾಗೂ ತ್ರಿಭಾಷಾ ಜಗತ್ತುಗಳನ್ನು ಜೋಡಿಸುವ, ಜ್ಞಾನದ ಹೊಸ ವೃತ್ತಗಳನ್ನು ಸೃಷ್ಟಿಸುವ ಹಾಗೂ ಪುಷ್ಟೀಕರಿಸಲು ಬಳಸಿಕೊಳ್ಳುವ ಪ್ರಯತ್ನವಾಗಿದೆ. ಅಂಥ ಆಚರಣೆಗಳ ಮೂಲಕ ದಲಿತ ವಿದ್ಯಾರ್ಥಿಗಳು, ವಿಚಾರವಂತರು, ಬ್ರಾಹ್ಮಣೇತರ ಪ್ರವಾಚಕರು, ಸ್ತ್ರೀವಾದಿ ವಿದ್ವಾಂಸರು ಹಾಗೂ ಕಾರ್ಯಕರ್ತರೊಂದಿಗೆ ತಳಕು ಹಾಕಿಕೊಳ್ಳುತ್ತದೆ. 'ದ ಬುದ್ಧ ಆಂಡ್ ಹಿಸ್ ಧಮ್ಮ' 'ಮ್ಯಾಡ್ನೆಸ್ಸ್ ಆಫ್ ಮನು' ಗ್ರಂಥದ ವಿರುದ್ಧ ಒಂದು ಮೈತ್ರಿಯ ಆಹ್ವಾನವಾಗಿದ್ದು ಸಾಮಾಜಿಕ ಸಹಚರ್ಯದ ಅತ್ಯಂತ ಮೂಲಭೂತ ರೀತಿಯನ್ನು ತಟ್ಟುತ್ತದೆ ಹಾಗೂ ಮೇಧಾವಿತನವನ್ನೂ ಪ್ರತಿಧ್ವನಿಸುತ್ತದೆ ಎಂದು ಹೇಳುತ್ತಾರೆ.

ಈ ಕೃತಿಗಳಲ್ಲಿ ವಿದ್ವತ್‌ಪೂರ್ಣ ದೀರ್ಘ ಪ್ರಸ್ತಾವನೆಗಳಿವೆ. ಅವು ರೇಗೆ ಒಬ್ಬ ಪ್ರಬುದ್ಧ ಲೇಖಕಿ ಎಂಬುದನ್ನು ಸಾಬೀತುಗೊಳಿಸಿವೆ. ಈ ಗ್ರಂಥಗಳ ಜೊತೆಗೆ ಭಾಗವತ್ ಹಾಗೂ ಇತರ ಸಹ ಲೇಖಕರೊಂದಿಗೆ ಅವರು ಅನೇಕ ಬರಹಗಳನ್ನು ಮರಾಠಿ ಹಾಗೂ ಇಂಗ್ಲಿಷಿನಲ್ಲಿ ಮಾಡಿದ್ದಾರೆ. ಈ ಎಲ್ಲ ಬರಹಗಳು ಸಮಾಜಶಾಸ್ತ್ರ ಕ್ಷೇತ್ರದಲ್ಲಿ ಭಾರತದ ಲಿಂಗ ಅಧ್ಯಯನ ರೇಗೆ ವಿಶಿಷ್ಟ ಸ್ಥಾನವನ್ನು ತಂದುಕೊಟ್ಟಿವೆ.

ಶರ್ಮಿಳಾ ರೇಗೆ ಸ್ತ್ರೀವಾದಿ ಚಿಂತಕಿಯಾಗಿ, ಸಮಾಜಶಾಸ್ತ್ರಜ್ಞೆಯಾಗಿ, ಬರಹಗಾರ್ತಿಯಾಗಿ, ಹೋರಾಟಗಾರ್ತಿಯಾಗಿ ಜಾತಿಯ ರಚನಾತ್ಮಕ ಹಿಂಸೆ ಮತ್ತು ಅದರ ಸಂಪರ್ಕದಲ್ಲಿ ಲೈಂಗಿಕತೆ ಮತ್ತು ಶ್ರಮಿಕತೆಯನ್ನು ಸ್ತ್ರೀವಾದದ ಚರ್ಚೆಯಲ್ಲಿ, ಬೋಧನೆಯಲ್ಲಿ, ತರಬೇತಿಯಲ್ಲಿ ಹಾಗೂ ಪಠ್ಯಕ್ರಮದಲ್ಲಿ ಯಶಸ್ವಿಯಾಗಿ ತಂದಿದ್ದಾರೆ. ಈ ಮೂಲಕ ಪುಣೆಯ ಕ್ರಾಂತಿಜ್ಯೋತಿ ಸಾವಿತ್ರಿಬಾಯಿ ಪುಲೆ ಮಹಿಳಾ ಅಧ್ಯಯನ ಕೇಂದ್ರವನ್ನು ಅರಿವಿನ ತಾಣವನ್ನಾಗಿ, ದೇಶದಲ್ಲಿ ಮಾದರಿ ಮಹಿಳಾ ಅಧ್ಯಯನ ಕೇಂದ್ರವನ್ನಾಗಿ ರೂಪಿಸಿದ್ದಾರೆ.

ರೇಗೆ ಅವರು "ತಮ್ಮ ಇ–ಮೇಲ್ ಕೊನೆಯಲ್ಲಿ ಅಂಬೇಡ್ಕರ್ ಅವರ ಮಾತುಗಳಿಂದ ಕೊನೆಗೊಳಿಸುತ್ತಿದ್ದರು. ಅವು; ನನ್ನ ಕೊನೆಯ ಸಲಹೆ, ನೀವು ಶಿಕ್ಷಣ ಪಡೆಯಿರಿ, ಸಮರ್ಥವಾಗಿ ಸಾಮಾಜಿಕ ರಾಜಕೀಯ ಬದಲಾವಣೆಗಾಗಿ ಪ್ರತಿಪಾದಿಸಿ ಮತ್ತು ಸಂಘಟಿತರಾಗಿ; ನಿಮ್ಮಲ್ಲಿ ನೀವು ವಿಶ್ವಾಸವಿಡಿ. ನ್ಯಾಯ ನಮ್ಮ ಕಡೆಗೆ ಇರಲಿ ನಾನು ನೋಡುತ್ತೇನೆ ನಾವು ಹೇಗೆ ಯುದ್ಧದಲ್ಲಿ ಸೋಲುತ್ತೇವೆ ಎಂದು"...... ಇದು ನಮ್ಮ ಮುಂದಿನ ನಡೆಯಾಗಲಿ ಎಂದು ಬಯಸುತ್ತೇನೆ.

**ಆಕರ ಸೂಚಿ**


1. Deepa Sreenivas. Remembering Sharmila Rege (1964 – 2013), Cafe Dissensus Everyday, 2013.
2. Mary John, Sharmila Rege, 1964-2013 in Contributions to Indian Sociology Sage Publications, New Delhi. 2013; 47(3):445-448.
3. Prof. Dhanagare DN. Sharmila Rege (1964-2013): Pursuing Knowledge for Social Transformation EPW, 2013.
4. Devika J, Mary John E, Kalpana Kannabiran, Samita Sen, Padmini Swaminathan, Sharmila Rege. (1964-2013): Tribute to a Phule-Ambedkarite Feminist Welder, EPW, 2013.
5. Anupama Katakam. Engagement with Dalit feminism, in Hindu, Online edition, Tuesday, 2007.
6. Mary John, Manu, FIaw-Giver. Matters of gender, and their centrality in Ambedkar's work Outlook, India
7. Geetha V. Invitation to Practise Social Fellowship, Economic & Political Weekly. 2013; XLVIII:29.